International Journal of Kannada Research
www.kannadajournal.com

ISSN: 2454–5813
IJSR 2016; 2(4): 148-156
© 2016 IJKS
www.kannadajournal.com
Received: 26-08-2016
Accepted: 27-09-2016

**ಡಾ. ಪಿ ಪ್ರದೀಪ್ ಕುಮಾರ್**
ಸಂಶೋಧನಾ ವಿದ್ಯಾರ್ಥಿ, ಅಪರಾಧಶಾಸ್ತ್ರ ಮತ್ತು ನ್ಯಾಯವಿಜ್ಞಾನ ಅಧ್ಯಯನ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

**ಮಲ್ಲಿಕಾರ್ಜುನ ಆರ್**
ಸಂಶೋಧನಾ ವಿದ್ಯಾರ್ಥಿ, ಅಪರಾಧಶಾಸ್ತ್ರ ಮತ್ತು ನ್ಯಾಯವಿಜ್ಞಾನ ಅಧ್ಯಯನ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

**Correspondence**
**ಡಾ. ಪಿ ಪ್ರದೀಪ್ ಕುಮಾರ್**
ಸಂಶೋಧನಾ ವಿದ್ಯಾರ್ಥಿ, ಅಪರಾಧಶಾಸ್ತ್ರ ಮತ್ತು ನ್ಯಾಯವಿಜ್ಞಾನ ಅಧ್ಯಯನ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

# ಕರ್ನಾಟಕ ಕಾರಾಗೃಹಗಳ ಸುಧಾರಣಾ ಸಿಬ್ಬಂದಿವರ್ಗದವರ ವಿವಿಧ ವೃಂದದ ಹುದ್ದೆಗಳನ್ನು ಸೃಜಿಸಿ ಕಾರಾಗೃಹ ಇಲಾಖೆಯನ್ನು ಉನ್ನತೀಕರಿಸುವ ಕುರಿತು ಸಂಕ್ಷಿಪ್ತ ವರದಿ.

**ಡಾ. ಪಿ ಪ್ರದೀಪ್ ಕುಮಾರ್, ಮತ್ತು ಮಲ್ಲಿಕಾರ್ಜುನ ಆರ್**

## ಪೀಠಿಕೆ

ಪ್ರಸ್ತುತ ನಾಗರೀಕ ಸಮಾಜದಲ್ಲಿ ಅಪರಾಧಗಳ ನಿಯಂತ್ರಣ ಮತ್ತು ಅಪರಾಧಿಗಳ ಮನಃಪರಿವರ್ತನೆಯಲ್ಲಿ ಕಾರಾಗೃಹಗಳು ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಿವೆ. ಕಾರಾಗೃಹಗಳು ಶಿಕ್ಷೆಯನ್ನು ಪ್ರತಿನಿಧಿಸುವ ಸಂಸ್ಥೆಯಾಗಿ ಮಾತ್ರವಲ್ಲದೆ, ಅಪರಾಧಿಯ ಖಾಯಂ ಹಾಗೂ ಆರೋಪಿಗಳ ತಾತ್ಕಾಲಿಕ ಆಶಯ ಸ್ಥಾನಗಳಾಗಿ ಕಾರ್ಯನಿರ್ವಹಿಸುತ್ತಿವೆ. ಅಪರಾಧವು ಸಾರ್ವತ್ರಿಕವಾದದ್ದಾಗಿದೆ, ಅಪರಾಧ ಮತ್ತು ಅಪರಾಧಿಯಿಲ್ಲದ ಸಮಾಜ ಅಥವಾ ಸಮುದಾಯಗಳಿಲ್ಲ ಆದುದರಿಂದ ನಾಗರೀಕರಿಂದ ಸಮಾಜ ವಿರೋಧಿ ಕೃತ್ಯದಲ್ಲಿ ತೊಡಗಿದವರನ್ನು ಪ್ರತ್ಯೇಕಿಸಲು ಕಾರಾಗೃಹಗಳು ಪ್ರತಿಯೊಂದು ಸಮಾಜದಲ್ಲಿ ಅತ್ಯಾವಶ್ಯಕ ಸಂಸ್ಥೆಗಳಾಗಿ ಕಾರ್ಯನಿರ್ವಹಿಸುತ್ತಿವೆ.
ಕಾರಾಗೃಹ ವ್ಯವಸ್ಥೆಯು ತನ್ನದೇ ಆದ ಕಾನೂನು ಹಾಗೂ ವಿಶೇಷವಾದ ಭದ್ರತಾ ವ್ಯವಸ್ಥೆಯನ್ನು ಹೊಂದಿದೆ. ಸದರಿ ಸಂಸ್ಥೆಗೆ ಸಂಬಂಧಿಸಿದಂತಹ ಆಡಳಿತಾತ್ಮಕ ಕಾರ್ಯನಿರ್ವಹಣೆಯು ಇತರ ಸಂಸ್ಥೆಗಳಿಗಿಂತ ವಿಭಿನ್ನವಾಗಿರುವುದರ ಜೊತೆಗೆ ಕಾರಾಗೃಹಗಳ ಆಂತರಿಕ ವ್ಯವಸ್ಥೆಗೆ ಸಂಬಂಧಿಸಿದಂತಹ ವಿಚಾರಗಳು ಅತೀ ಸೂಕ್ಷ್ಮ ಹಾಗೂ ಸಂಕೀರ್ಣತೆಯಿಂದ ಕೂಡಿರುತ್ತದೆ. ಕಾರಾಗೃಹ ವ್ಯವಸ್ಥೆಯು ಆಪಾದನೆಗೆ ಗುರಿಯಾಗಿರುವ ಆರೋಪಿಗಳು ಮತ್ತು ಅಪರಾಧಿಗಳು ಇರುವ ನಿಯಂತ್ರಿತ ವ್ಯವಸ್ಥೆಯಾಗಿದೆ.
ಕಾರಾಗೃಹಗಳು ಕೇವಲ ಅಪರಾಧಿಗಳನ್ನು ಮತ್ತು ಆರೋಪಿಗಳನ್ನು ಸಮಾಜದಿಂದ ಪ್ರತ್ಯೇಕಿಸುವುದರ ಮೂಲಕ ಶಿಕ್ಷಿಸುವ ನಿಯಂತ್ರಿತ ವ್ಯವಸ್ಥೆಯಾಗಿರದೆ, ಬಂದಿಗಳ ನಡವಳಿಕೆಯನ್ನು ಸರಿಪಡಿಸಿ, ಅವರಲ್ಲಿನ ದೋಷಪೂರಿತ ವ್ಯಕ್ತಿತ್ವವನ್ನು ಸುಧಾರಣೆಗೊಳಪಡಿಸಿ, ಬಿಡುಗಡೆ ನಂತರ ಅವರನ್ನು ಸಮಾಜದ ಮುಖ್ಯವಾಹಿನಿಗೆ ಕರೆತರುವ ಸದುದ್ದೇಶವನ್ನು ಹೊಂದಿರುವ ಸುಧಾರಣಾ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿವೆ. ವಿರೋಧಭಾಸವೆಂದರೆ ಬಂದಿಗಳನ್ನು ಪರಿವರ್ತನೆಗೆ ಒಳಪಡಿಸಬೇಕಾದ ಅಧಿಕಾರಿಗಳಿಗೆ ಹಾಗೂ ಸಿಬ್ಬಂದಿವರ್ಗದವರಿಗೆ ಯಾವ ಪ್ರಕಾರವಾಗಿ ಸುಧಾರಣಾ ಅಂಶಗಳನ್ನು ವ್ಯವಸ್ಥಿತವಾಗಿ ಕಾರಾಗೃಹಗಳಲ್ಲಿ ಜಾರಿಗೆ ತರಬೇಕು ಹಾಗೂ ಯಾವ ಪ್ರಕಾರವಾಗಿ ಬಂದಿಗಳನ್ನು ಸುಧಾರಣಾ ಮಾರ್ಗಕ್ಕೆ ಕೊಂಡೊಯ್ಯಬೇಕೆಂಬ ಸ್ಪಷ್ಟವಾದ ಮಾರ್ಗದರ್ಶನದ ಕೊರತೆ ಇರುವುದನ್ನು ಗುರುತಿಸಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟ ಸುಧಾರಿತ ಯೋಜನೆಯನ್ನು ರೂಪಿಸುವಲ್ಲಿ ಸಂಬಂಧಪಟ್ಟ ಪ್ರಾಧಿಕಾರದವರು ವಿಫಲರಾಗಿದ್ದಾರೆ.

## ಕಾರಾಗೃಹದ ಅರ್ಥ

ಕಾರಾಗೃಹ ಎಂಬ ಪದವು ಆಂಗ್ಲ ಭಾಷೆಯ 'ಪ್ರಿಸನ್' ಎಂಬ ಪದದ ಕನ್ನಡದ ರೂಪಾಂತರವಾಗಿದೆ. 'ಪ್ರಿಸನ್' ಎಂಬ ಪದವು ಪ್ರಾಚೀನ ಫ್ರೆಂಚ್ ಭಾಷೆಯ "ಪ್ರಿಸೋನ್" ಎಂಬ ಪದದಿಂದ ಬಂದಿದೆ. ಪ್ರಿಸೋನ್ ಎಂದರೆ, "ಆರೋಪಿ ಅಥವಾ ಅಪರಾಧಿಯನ್ನು ದೈಹಿಕವಾಗಿ ಬಂಧನದಲ್ಲಿಡುವ ಮೂಲಕ ಅವರುಗಳ ವೈಯಕ್ತಿಕ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವುದು ಎಂಬುದಾಗಿದೆ." ಕಾರಾಗೃಹವನ್ನು ಜೈಲು, ಪರಿವರ್ತನಾಲಯ, ಬಂದಿಖಾನೆ, ಸುಧಾರಣಾ ಗೃಹ, ತುರಂಗ, ಸೆರೆಮನೆ, ತಿದ್ದುವ ಅಥವಾ ಸನ್ಮಾರ್ಗಕ್ಕೆ

ಅವಕಾಶ ಕಲ್ಪಿಸುವ ಗೃಹ, ಬಂಧನಗೃಹ ಮೊದಲಾದ ಹೆಸರಿನಿಂದ ಕರೆಯಲಾಗುತ್ತದೆ.

ಭಾರತದ ಸ್ವಾತಂತ್ರ್ಯಾನಂತರ ಕಾರಾಗೃಹ ವ್ಯವಸ್ಥೆಯನ್ನು ಸಂವಿಧಾನದ ೭ ನೇ ಅನುಸೂಚಿ, ೨ ನೇ ಭಾಗದ ಅನ್ವಯ ರಾಜ್ಯಪಟ್ಟಿಯಲ್ಲಿ ಸೇರಿಸಲಾಗಿದೆ. ಕಾರಾಗೃಹ, ಬಂದಿಗಳ ಸುಧಾರಣಾ ತತ್ವಗಳು, ಬೋಸ್ಟಲ್ ಶಾಲೆ, ಕಾರಾಗೃಹಗಳ ಆಡಳಿತ ಮತ್ತು ಇವುಗಳಿಗೆ ಸಂಬಂಧಿಸಿದಂತಹ ಸಂಪೂರ್ಣವಾದ ಜವಾಬ್ದಾರಿಗಳನ್ನು ರಾಜ್ಯ ಸರ್ಕಾರಗಳ ನಿಯಂತ್ರಣಕ್ಕೆ ನೀಡಲಾಗಿದೆ.

ಕರ್ನಾಟಕ ಕಾರಾಗೃಹ ಕಾಯ್ದೆ, ೧೯೬೩: ವಿಧಿ ೨ (೧) (ಗ) ರ ಅನ್ವಯ, "ಕರ್ನಾಟಕ ರಾಜ್ಯದ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ತಾತ್ಕಾಲಿಕವಾಗಿ ಅಥವಾ ಖಾಯಂ ಆಗಿ ಬಂದಿಗಳನ್ನು ಪ್ರತ್ಯೇಕಿಸುವ ಸೆರೆಯ ಮತ್ತು ಅದಕ್ಕೆ ಸಂಬಂಧಿಸಿದ ಎಲ್ಲಾ ಭೂಮಿ ಹಾಗೂ ಕಟ್ಟಡಗಳನ್ನು ಒಳಗೊಂಡಿರುವ ನಿರ್ದಿಷ್ಟ ಸ್ಥಳ."

ದಂಡ ಪಕ್ರಿಯಾ ಸಂಹಿತೆ, ೧೯೭೩: ಕಲಂ– ೨೬೬ (ಬಿ), ಅಧ್ಯಾಯ– ೨೨ ರ ಅನ್ವಯ "ರಾಜ್ಯ ಸರ್ಕಾರದಿಂದ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಸೆರೆಮನೆ ಎಂದು ಘೋಷಿತವಾದ ಸ್ಥಳ, ಸುಧಾರಣಾಲಯ, ಬೋರ್ಸ್ಟಲ್ ಶಾಲೆ ಅಥವಾ ಆ ಸ್ವರೂಪದ ಇತರೆ ಎಲ್ಲಾ ಸಂಸ್ಥೆಗಳನ್ನು ಒಳಗೊಂಡಿರುತ್ತದೆ. ಆದರೆ ಕಾರಾಗೃಹವು ಪೊಲೀಸ್ ಬಂಧನದಲ್ಲಿನ ಆರೋಪಿ ಅಥವಾ ಅಪರಾಧಿಯನ್ನು ಬಂಧಿಸಲು ಇರುವ ಯಾವುದೇ ಪ್ರಕಾರದ ಸ್ಥಳವನ್ನೂ ಒಳಗೊಂಡಿರುವುದಿಲ್ಲ."

**ಪ್ರಸ್ತುತ ಕಾರಾಗೃಹ ವ್ಯವಸ್ಥೆಯಲ್ಲಿನ ಸುಧಾರಣಾ ಸಿಬ್ಬಂದಿವರ್ಗದವರ ವಾಸ್ತವಿಕ ಚಿತ್ರಣ**

ಸಮಾಜದಲ್ಲಿನ ಸರಕಾರಿ ಅಥವಾ ಖಾಸಗಿ ಒಡೆತನದಲ್ಲಿನ ಯಾವುದೇ ಪ್ರಕಾರದ ಸಂಸ್ಥೆಯ ಕಾರ್ಯನಿರ್ವಹಣೆಯಲ್ಲಿ ಪ್ರಧಾನ ಪಾತ್ರವಹಿಸುವವರು ಅಲ್ಲಿನ ಸಿಬ್ಬಂದಿವರ್ಗದವರು. ಪ್ರತಿಯೊಂದು ಸಂಸ್ಥೆಯ ಬೆಳವಣಿಗೆಯಲ್ಲಿ ಸಿಬ್ಬಂದಿವರ್ಗದವರೇ ಪ್ರತ್ಯಕ್ಷ ಹಾಗೂ ಪರೋಕ್ಷ ಕಾರಣ ಕರ್ತೃಗಳಾಗಿರುತ್ತಾರೆ. ಸಂಸ್ಥೆಯ ಕಾರ್ಯನಿರ್ವಹಣೆಯ ವಿಷಯಕ್ಕೆ ಸಂಬಂಧಿಸಿದಂತೆ ಅಲ್ಲಿನ ಸಿಬ್ಬಂದಿವರ್ಗದವರು ಎದುರಿಸುವ ಸಮಸ್ಯೆಗಳು ಅಸಾಧಾರಣವಾದದ್ದು. ಪ್ರತಿಯೊಂದು ಸಂಸ್ಥೆಯು ಅನೇಕ ಪ್ರಕಾರದ ಸಮಸ್ಯೆಗಳ ಮೂಲಕ ತನ್ನ ಸಿಬ್ಬಂದಿವರ್ಗದವರ ಮೇಲೆ ಋಣಾತ್ಮಕ ಪರಿಣಾಮವನ್ನು ಉಂಟುಮಾಡುತ್ತಿರುವುದು ಕಂಡುಬರುತ್ತಿದೆ. ಪ್ರತಿಯೊಬ್ಬ ಸಿಬ್ಬಂದಿಯು ಕಡ್ಡಾಯವಾಗಿ ತನ್ನ ಸಂಸ್ಥೆಯ ನಿಯಂತ್ರಿತ ವಾತಾವರಣದಲ್ಲಿ ಹಾಗೂ ಅಲ್ಲಿನ ನಿಯಮಾವಳಿಗಳ ಅನ್ವಯ ಕಾರ್ಯನಿರ್ವಹಿಸಬೇಕಾಗುತ್ತದೆ. ಪ್ರತಿಯೊಂದು ಸಂಸ್ಥೆಯ ಆಡಳಿತಾತ್ಮಕ ಕಾರ್ಯನಿರ್ವಹಣೆಯಲ್ಲಿ ಸಾಕಷ್ಟು ವೈವಿಧ್ಯತೆಗಳು ಇರುವುದನ್ನು ಗಮನಿಸಬಹುದು. ಕೆಲವೊಂದು ಸಂಸ್ಥೆಗಳಲ್ಲಿ ದೈಹಿಕ ಪರಿಶ್ರಮದ ಕೆಲಸವಿದ್ದರೆ, ಹಲವು ಕಡೆ ಮಾನಸಿಕ ಪರಿಶ್ರಮದಿಂದ ಕೂಡಿದ ಕೆಲಸಗಳನ್ನು ಸಿಬ್ಬಂದಿವರ್ಗದವರು ನಿರ್ವಹಿಸಬೇಕಾಗುತ್ತದೆ.

ಕಾರಾಗೃಹ ವ್ಯವಸ್ಥೆಯು ರಾಜ್ಯ ಸರ್ಕಾರದ ನಿಯಂತ್ರಣದಲ್ಲಿರುವ ವಿಶಿಷ್ಟವಾದ ಒಂದು ಸುಧಾರಣಾ ಸಂಸ್ಥೆಯಾಗಿದೆ. ಕಾರಾಗೃಹಗಳ ರಕ್ಷಣಾ ಸಿಬ್ಬಂದಿಯವರು ನಿಯಂತ್ರಿತ ಅತೀ ಸೂಕ್ಷ್ಮ ವಾತಾವರಣದಲ್ಲಿ ತಮ್ಮ ದೈನಂದಿನ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆ. ಕಾರಾಗೃಹ ಇಲಾಖೆಯಲ್ಲಿ ಬಹಳಷ್ಟು ಪ್ರಯಾಸದಿಂದ ಕೂಡಿದ ಕರ್ತವ್ಯವನ್ನು ಸಿಬ್ಬಂದಿವರ್ಗದವರು ನಿರ್ವಹಿಸಬೇಕಾದ ಅನಿವಾರ್ಯತೆಯಿದೆ. ಕಾರ್ಯನಿರ್ವಹಣಾ ಸ್ಥಳಗಳಲ್ಲಿ ಸುಧಾರಣಾ ಸಿಬ್ಬಂದಿವರ್ಗದವರಿಗೆ ಅತೃಪ್ತಿ, ವೃತ್ತಿಕರಕಲಾಗುವಿಕೆ (ಎಠಥ ಃಣಡಿಟಿಂಣಣ), ಕಾಳಜಿ ಹಾಗೂ ಕಾರಾಗೃಹಗಳಲ್ಲಿನ ಕಾರ್ಯನಿರ್ವಹಣೆಯು ವೃತ್ತಿ ಒತ್ತಡದೊಂದಿಗೆ ನಿರಂತರವಾಗಿ ಸಹಸಂಬಂಧ ಹೊಂದಿರುವುದನ್ನು ಗುರುತಿಸಲಾಗಿದೆ (Atikin-Plunk & Armstrong, 2013). ಕಾರಾಗೃಹಗಳ ಸಿಬ್ಬಂದಿವರ್ಗದವರು ದೈಹಿಕ ಪರಿಶ್ರಮಕ್ಕಿಂತ, ಮಾನಸಿಕ ಪರಿಶ್ರಮದಿಂದ ಕೂಡಿದ ಕೆಲಸವನ್ನೇ ಹೆಚ್ಚಾಗಿ ನಿರ್ವಹಿಸುತ್ತಿರುವುದನ್ನು ಕಾಣಬಹುದು. ಸಾಮಾಜಿಕ ಕ್ರಮಗಳನ್ನು ಕಾಪಾಡುವ ಕುಶಲತೆ ನಿಜಕ್ಕೂ ಕಾರಾಗೃಹಗಳಲ್ಲಿನ ಸುಧಾರಣಾ ಸಿಬ್ಬಂದಿವರ್ಗದವರಿಗೆ ಒಂದು ದೊಡ್ಡ ಸವಾಲೆಸೆಯುವ ಸಮಸ್ಯೆಯಾಗಿದೆ (Libeling, 2000).

ಬಂದಿಗಳ ಪ್ರತಿಭಟನೆ, ದೊಂಬಿಗಳನ್ನು ನಿಯಂತ್ರಿಸುವುದು, ಬಂದಿಗಳ ಶಿಸ್ತಿನ ನಿರ್ವಹಣೆ, ಕಾರಾಗೃಹಗಳಲ್ಲಿ ಭದ್ರತಾ ವ್ಯವಸ್ಥೆಯ ಪರಿಶೀಲನೆ, ಬಂದಿಗಳ ಹಾಗೂ ಕೊಠಡಿಗಳ ತಪಾಸಣೆ, ವಿಭಿನ್ನ ವರ್ಗದ ಬಂದಿಗಳ ನಿರ್ವಹಣೆ, ಬಂದಿಗಳ ಚಲನವಲನಗಳನ್ನು ಗಮನಿಸುವಿಕೆ ಹಾಗೂ ಮಾನಸಿಕ ಅಸ್ವಸ್ಥತೆಯ ಬಂದಿಗಳ ನಿರ್ವಹಣೆ ಮೊದಲಾದ ಕಷ್ಟಕರವಾದ ಕರ್ತವ್ಯವನ್ನು ಸಿಬ್ಬಂದಿವರ್ಗದವರು ನಿರ್ವಹಿಸಬೇಕಾಗುತ್ತದೆ. ಕಾರಾಗೃಹಗಳಲ್ಲಿ ಕಾರ್ಯನಿರ್ವಹಿಸುವಿಕೆಯು ಅತೀ ಹೆಚ್ಚು ಒತ್ತಡ ಭರಿತವಾಗಿರುತ್ತದೆ ಮಾತ್ರವಲ್ಲದೆ ದೈಹಿಕ ಮತ್ತು ಮಾನಸಿಕ ಆರೋಗ್ಯ ಸಹ ಹದಗೆಡುತ್ತದೆ (Woodall, 2013).

ಕಾರಾಗೃಹ ವ್ಯವಸ್ಥೆಯು ತನ್ನದೇ ಆದ ಕಾನೂನು ಹಾಗೂ ವಿಶೇಷವಾದ ಭದ್ರತಾ ವ್ಯವಸ್ಥೆಯನ್ನು ಹೊಂದಿದೆ. ಸದರಿ ಸಂಸ್ಥೆಗೆ ಸಂಬಂಧಿಸಿದಂತಹ ಆಡಳಿತಾತ್ಮಕ ಕಾರ್ಯನಿರ್ವಣೆಯು ಇತರ ಸಂಸ್ಥೆಗಳಿಗಿಂತ ವಿಭಿನ್ನವಾಗಿರುವುದರ ಜೊತೆಗೆ ಕಾರಾಗೃಹಗಳ ಆಂತರಿಕ ವ್ಯವಸ್ಥೆಗೆ ಸಂಬಂಧಿಸಿದಂತಹ ವಿಚಾರಗಳು ಅತೀ ಸೂಕ್ಷ್ಮ ಹಾಗೂ ಸಂಕೀರ್ಣತೆಯಿಂದ ಕೂಡಿರುತ್ತದೆ. ಕಾರಾಗೃಹ ವ್ಯವಸ್ಥೆಯು ಆಪಾದನೆಗೆ ಗುರಿಯಾಗಿರುವ ಆರೋಪಿಗಳು ಮತ್ತು ಅಪರಾಧಿಗಳು ಇರುವ ನಿಯಂತ್ರಿತ ವ್ಯವಸ್ಥೆಯಾಗಿದೆ. ಸುಧಾರಣಾ ಸಿಬ್ಬಂದಿವರ್ಗದವರಿಗೆ ಅನೇಕ ಸಮಸ್ಯೆಗಳನ್ನು ಸೃಷ್ಟಿಸುವಲ್ಲಿ ಋಣಾತ್ಮಕ ಮನೋಭಾವದ ಅಪರಾಧಿ ಗುಂಪುಗಳು ಕಾರಾಗೃಹಗಳಲ್ಲಿ ಪ್ರಧಾನ ಪಾತ್ರವನ್ನು ನಿರ್ವಹಿಸುತ್ತದೆ (Huggins, Cape-Heart & Newman, 2006).

ಕಾರಾಗೃಹಗಳಲ್ಲಿ ಛಿದ್ರ ವ್ಯಕ್ತಿತ್ವವುಳ್ಳ ಬಂದಿಗಳನ್ನು ನಿಯಂತ್ರಿಸುವ ಕಾರ್ಯವು ಯಾವಾಗಲೂ ಕ್ಲಿಷ್ಟತೆಯಿಂದ ಕೂಡಿರುತ್ತದೆ. ಈ ವ್ಯವಸ್ಥೆಯಲ್ಲಿ ಅನಿರೀಕ್ಷಿತವಾಗಿ ದುರ್ಘಟನೆಗಳು ಸಂಭವಿಸುವ ಸಾಧ್ಯತೆ ಅಧಿಕವಾಗಿರುವುದರಿಂದ ಸಿಬ್ಬಂದಿವರ್ಗದವರು ಯಾವಾಗಲೂ ಜಾಗರೂಕತೆಯಿಂದ ತಮ್ಮ ದೈನಂದಿನ ಕರ್ತವ್ಯವನ್ನು ನಿರ್ವಹಿಸಬೇಕಾದ ಪರಿಸ್ಥಿತಿಯಿದೆ. ಕಾರಾಗೃಹ ವ್ಯವಸ್ಥೆಯಲ್ಲಿ ಸಮಸ್ಯೆಗಳ ಕವಲೊಡೆಯುವಿಕೆಯಿಂದ ವೃತ್ತಿಕರಕಲಾಗುವಿಕೆಯ (Job Burnout) ಸಮಸ್ಯೆಗಳು ದುರ್ಬರವಾಗಬಹುದು (Minor, Wells, Angel & Matz, 2010). ಇಂತಹ ಪರಿಸ್ಥಿತಿಯಲ್ಲಿ ಸಿಬ್ಬಂದಿವರ್ಗದವರು ಬಲಿಪಶುಗಳಾಗುವ ಸಾಧ್ಯತೆಯು ಹೆಚ್ಚಿನ ಪ್ರಮಾಣದಲ್ಲಿರುತ್ತದೆ ಎಂಬುದನ್ನು ಗಮನಿಸಬೇಕು.

ಇತ್ತೀಚಿನ ದಿನಗಳಲ್ಲಿ ಕಾರಾಗೃಹಗಳಿಗೆ ದಾಖಲಾಗುತ್ತಿರುವ ಬಂದಿಗಳ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದ್ದು, ಅದರಲ್ಲಿಯೂ ಕುಖ್ಯಾತ ಬಂದಿಗಳು, ರೌಡಿ ಗುಂಪುಗಳು, ಗೂಂಡಾ ಕಾಯ್ದೆ, ಕಾಫಿ ಪೋಸಾ ಬಂದಿಗಳು, ಮಾದಕ ವಸ್ತು ಕಳ್ಳಸಾಗಾಣಿಕೆದಾರರು, ವಿದೇಶಿ ಬಂದಿಗಳು, ಶಂಕಿತ ಭಯೋತ್ಪಾದಕರು, ನಕ್ಸಲೀಯರು ಮತ್ತು ಮರಣ ದಂಡನೆ ಬಂದಿಗಳು ಸೇರಿದಂತೆ ವಿವಿಧ ಅಪರಾಧ ಹಿನ್ನಲೆಯುಳ್ಳ ಬಂದಿಗಳು ಕಾರಾಗೃಹಗಳಲ್ಲಿ ದಾಖಲಾಗುತ್ತಿದ್ದು,

ಸದರಿ ಬಂದಿಗಳನ್ನು ಅತೀ ಎಚ್ಚರಿಕೆಯಿಂದ ಕಾವಲು ಕಾಯಲು ಸಿಬ್ಬಂದಿಗಳ ತೀವ್ರ ಕೊರತೆ ಇರುವುದರಿಂದ ಕಾರಾಗೃಹಗಳ ಆಡಳಿತವನ್ನು ಸುಗಮವಾಗಿ ನಡೆಸಿಕೊಂಡು ಹೋಗಲು ಸಾಕಷ್ಟು ತೊಂದರೆಗಳನ್ನು ಹಾಗೂ ಸಮಸ್ಯೆಗಳನ್ನು ಎದುರಿಸಲಾಗುತ್ತಿದೆ.

ಅಲ್ಲದೇ ಸಿಬ್ಬಂದಿ ಕೊರತೆಯನ್ನು ನೆಪಮಾಡಿಕೊಂಡು ಕರ್ತವ್ಯ ನಿರತ ಸಿಬ್ಬಂದಿಗಳನ್ನು ಬ್ಲಾಕ್‌ಮೇಲ್ ತಂತ್ರ ಉಪಯೋಗಿಸಿ ಅವರನ್ನು ಮಾನಸಿಕವಾಗಿ ಒತ್ತಡಕ್ಕೀಡು ಮಾಡಿ ತಮ್ಮ ಕಾರ್ಯಸಾಧನೆಗೆ ಪ್ರಯತ್ನಿಸುತ್ತಾರೆ. ಭದ್ರತೆ ದೃಷ್ಟಿಯಿಂದ ಬಂದಿಗಳ ಕೊಠಡಿಗಳನ್ನು ಹಾಗೂ ಬಂದಿಗಳನ್ನು ಶೋಧನೆಗೆ ಒಳಪಡಿಸಿ ನಿಷೇಧಿತ ವಸ್ತುಗಳು ದೊರೆತ ಸಂದರ್ಭದಲ್ಲಿ ಕೆಲವು ಬಂದಿಗಳ ಕುತಂತ್ರದಿಂದ ತಪಾಸಣೆ ಮಾಡಿದ ಸಿಬ್ಬಂದಿಯ ಮೇಲೆಯೇ ಅವರೇ ತಂದುಕೊಟ್ಟರೆಂದು ಸುಳ್ಳು ದೂರು ನೀಡುತ್ತಾರೆ. ಅವರ ಕರ್ತವ್ಯಕ್ಕೆ ಅಡ್ಡಿ ಪಡಿಸುವುದೇ ಅಲ್ಲದೇ ಸಿಬ್ಬಂದಿಯನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ಅವರಿಗೆ ಮತ್ತು ಅವರ ಕುಟುಂಬಕ್ಕೆ ತೊಂದರೆ ಮಾಡುವ ಬೆದರಿಕೆಗಳನ್ನು ಸಹ ಹಾಕುತ್ತಾರೆ. ಇಷ್ಟೆಲ್ಲ ಅನಾಹುತವಾಗುತ್ತಿದ್ದಾಗ್ಯೂ ಹಿರಿಯ ಅಧಿಕಾರಿಗಳು ತಮಗೆ ಈ ವಿಚಾರಗಳು ಸಂಬಂಧಿಸಿಯೇ ಇಲ್ಲವೆಂಬಂತೆ ತಟಸ್ಥ ನೀತಿ ಅನುಸರಿಸುತ್ತಿದ್ದಾರೆ.

ಕಾರಾಗೃಹಗಳಲ್ಲಿ ಘೋರ ಅಪರಾಧದ ಘಟನೆಯ ಹಿನ್ನಲೆಯನ್ನು ಹೊಂದಿರುವ ಬಂದಿಗಳು ಸುಧಾರಣಾ ಸಿಬ್ಬಂದಿವರ್ಗದವರಿಗೆ ಪ್ರಬಲ ಪ್ರತಿರೋಧ ಒಡ್ಡುವುದರಿಂದ ಅವರ ಕುರಿತಾಗಿ ಅಧಿಕಾರಿಗಳು/ಸಿಬ್ಬಂದಿವರ್ಗದವರಲ್ಲಿ ನಿರಾಶಾವಾದ, ಅಧಿಕಾರಶಾಹಿ ಮನೋಭಾವ ಮತ್ತು ಬಂದಿಗಳಿಂದ ಅಂತರ ಕಾಯ್ದುಕೊಳ್ಳುವಿಕೆಯ ಅಂಶವು ವೃದ್ಧಿಯಾಗುತ್ತಿದೆ (Kassebaum, Ward & Wilner, 1964). ರಕ್ಷಣಾ ಸಿಬ್ಬಂದಿವರ್ಗದವರು ಬಂದಿಗಳ ನಿರ್ವಹಣೆ, ಅವರ ದೈನಂದಿನ ಮೂಲಭೂತ ಅಗತ್ಯತೆಗಳನ್ನು ಪೂರೈಸುವ ಜವಬ್ದಾರಿ, ಕಾನೂನಿನ ಅನ್ವಯ ಸಮರ್ಪಕವಾಗಿ ನಿಯಂತ್ರಿಸುವಿಕೆ, ಬಂದಿಗಳ ಮಾನವಹಕ್ಕುಗಳು ಉಲ್ಲಂಘನೆಯಾಗದಂತೆ ರಕ್ಷಿಸುವಿಕೆ, ಬಂದಿಗಳಿಗೆ ಅಗತ್ಯವಾದ ಮಾರ್ಗದರ್ಶನ, ರಕ್ಷಣೆ ಒದಗಿಸುವ ಕೆಲಸ, ಬಂದಿಗಳ ಆರೋಗ್ಯ ಮತ್ತು ಕಾರಾಗೃಹದ ನೈರ್ಮಲ್ಯತೆಯ ನಿರ್ವಹಣೆಯ ಉಸ್ತುವಾರಿಯನ್ನು ಸಿಬ್ಬಂದಿವರ್ಗದವರು ನಿರ್ವಹಿಸಬೇಕಾಗುತ್ತದೆ. ಇಷ್ಟೆಲ್ಲಾ ಕಾರ್ಯನಿರ್ವಹಿಸುವ ಸುಧಾರಣಾ ಸಿಬ್ಬಂದಿವರ್ಗದವರೇ ಒಂದು ದೃಷ್ಟಿಕೋನದಿಂದ ಗಮನಿಸಿದರೆ ವ್ಯವಸ್ಥೆಯಲ್ಲಿ ಬಂದಿಗಳಿಗಿಂತಲೂ ಹೆಚ್ಚಾಗಿ ಶೋಷಿತರಾಗುತ್ತಿರುವುದು ಮತ್ತು ಹೀನ ಸ್ಥಿತಿಯಲ್ಲಿರುವುದು ಕಂಡುಬಂದಿದೆ. ದೈನಂದಿನ ವೃತ್ತಿ ಜೀವನಕ್ಕೆ ಸಂಬಂಧಿಸಿದಂತೆ ಸುಧಾರಣಾ ಸಿಬ್ಬಂದಿವರ್ಗದವರ ಜೀವನವು ಗಂಭೀರ ಸ್ವರೂಪದಲ್ಲಿದೆ (ಉಚಿಡಿಟಚಿಟಿಜ, & ಒಫಿಅಚಿಡಿಣಥಿ, ೨೦೦೯).

ಅಧಿಕ ಕಾರ್ಯನಿರ್ವಹಣೆ ಹಾಗೂ ಕಾರಾಗೃಹಗಳಲ್ಲಿನ ವಿವಿಧ ಸಮಸ್ಯೆಗಳಿಂದಾಗಿ ಸಿಬ್ಬಂದಿವರ್ಗದವರಲ್ಲಿ ಖಿನ್ನತೆ, ಹತಾಶೆ, ಉದ್ವಿಗ್ನತೆ ಹಾಗೂ ಮಾನಸಿಕ ಒತ್ತಡ ಉಲ್ಬಣಗೊಳ್ಳುತ್ತಿರುವ ಪರಿಣಾಮ ತಮ್ಮ ವೃತ್ತಿಯ ಬಗ್ಗೆ ಅತೃಪ್ತಿ ಹಾಗೂ ಅಧಿಕಾರಿಗಳ ಬಗ್ಗೆ ಅಸಮಾಧಾನ ಹೆಚ್ಚಾಗುತ್ತಿದೆ (Schaufeli & Peeters, 2000).

ಕಾರಾಗೃಹಗಳಲ್ಲಿ ಬಂದಿಗಳಿಗೆ ಮೂಲಭೂತ ಸೌಕರ್ಯ ಹಾಗೂ ಸ್ಥಳಾವಕಾಶದ ಕೊರತೆ ಇರುವುದರಿಂದ ಸಾರ್ವಜನಿಕ ಹಿತಾಸಕ್ತಿಯ ಅರ್ಜಿಗಳು ನ್ಯಾಯಾಲಯಗಳಲ್ಲಿ ದಾಖಲಾಗುತ್ತಿರುವುದು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿ ಕಂಡುಬರುತ್ತಿದೆ. ಅಧಿಕೃತ ಸಾಮರ್ಥ್ಯಕ್ಕಿಂತ ಹೆಚ್ಚಿನ ಬಂದಿಗಳು ದಾಖಲಾಗುತ್ತಿರುವುದರಿಂದ ಮೂಲಭೂತ ಸೌಕರ್ಯಗಳ ಸಮಸ್ಯೆ, ಆಡಳಿತಾತ್ಮಕ ಸಮಸ್ಯೆಗಳು ಹಾಗೂ ಭದ್ರತೆಯ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಹಲವು ಸುಧಾರಣೆ ಕ್ರಮಗಳನ್ನು ತೆಗೆದುಕೊಳ್ಳುವಂತೆ ಗೌ॥ ನ್ಯಾಯಾಲಯಗಳು, ಮಾನವ ಹಕ್ಕುಗಳ ಆಯೋಗ ನಿರಂತರವಾಗಿ ನಿರ್ದೇಶನಗಳನ್ನು ನೀಡುತ್ತಲೇ ಇರುತ್ತದೆ. ಕಾರಾಗೃಹಗಳಲ್ಲಿ ಬಂದಿಗಳ ನಿರ್ವಹಣೆ ಜೊತೆಗೆ, ಅವರಿಗೆ ಬಿಡುಗಡೆ ನಂತರ ತಮ್ಮ ಜೀವನೋಪಾಯಕ್ಕಾಗಿ ವೃತ್ತಿಪರ ತರಬೇತಿಗಳನ್ನು ನೀಡಿ ಅವರಿಗೆ ಪುನರ್ವಸತಿ ಕಲ್ಪಿಸುವ ಸಂಬಂಧ ಕಾರಾಗೃಹಗಳಲ್ಲಿ ತೋಟಗಾರಿಕೆ, ಕೃಷಿ, ಹೈನುಗಾರಿಕೆ, ಸಣ್ಣ ಉದ್ದಿಮೆಗಳ ಬಗ್ಗೆ ತರಬೇತಿ ಮತ್ತು ಕೈಗಾರಿಕೆಗಳ ಚಟುವಟಿಕೆಗಳನ್ನು ಕೈಗೊಳ್ಳಬೇಕಿದೆ, ಮುಂದಿನ ದಿನಗಳಲ್ಲಿ ಸದರಿ ಚಟುವಟಿಕೆಗಳನ್ನು ಹೆಚ್ಚು ಹೆಚ್ಚು ಅಳವಡಿಸಿ ಇಡೀ ದೇಶದಲ್ಲಿಯೇ ಕರ್ನಾಟಕ ಕಾರಾಗೃಹ ವ್ಯವಸ್ಥೆಯು ಒಂದು ಮಾದರಿಯಾಗಿ ನಿರ್ವಹಣೆ ಮಾಡಲು ಮಾರ್ಗೋಪಾಯಗಳನ್ನು ಕಂಡುಕೊಳ್ಳಬೇಕಿದೆ, ಈ ಹಿನ್ನಲೆಯಲ್ಲಿ ಬಂದಿಗಳ ಮುಖಾಂತರ ಸದರಿ ಚಟುವಟಿಕೆಗಳನ್ನು ಮಾಡಿಸಲು ಹಾಗೂ ಕಾರಾಗೃಹಗಳ ಭದ್ರತೆ ಮತ್ತು ಸುರಕ್ಷತೆಯ ದೃಷ್ಟಿಯಿಂದ ಕಾರಾಗೃಹ ಇಲಾಖೆಯಲ್ಲಿ ಅತೀ ಜರೂರಾಗಿ ಬೇಕಾಗಿರುವ ವಿವಿಧ ವೃಂದಗಳ ಹುದ್ದೆಗಳನ್ನು ಸೃಜನೆ ಮಾಡುವ ಅಗತ್ಯವಿರುತ್ತದೆ. ಸಿಬ್ಬಂದಿಗಳು ತೀವ್ರ ಕೊರತೆಯಿರುವ ಕಾರಾಗೃಹಗಳಲ್ಲಿ ಕರ್ತವ್ಯ ನಿರ್ವಹಿಸುವ ಅಧಿಕಾರಿ/ಸಿಬ್ಬಂದಿಗಳು ಕಾರಾಗೃಹದ ಸಮಸ್ಯೆಗಳ ಕುರಿತಾಗಿ ಅಸಹಾಯಕರಾಗಿರುತ್ತಾರೆ.

ಕರ್ನಾಟಕ ರಾಜ್ಯದಾದ್ಯಂತ ಎಲ್ಲಾ ಕಾರಾಗೃಹಗಳ ಪರಿಸ್ಥಿತಿ ಇದೇ ರೀತಿಯಾಗಿದೆ. ಸಿಬ್ಬಂದಿ ಕೊರತೆಯಿರುವಂತಹ ಕಾರಾಗೃಹಗಳ ಭದ್ರತೆಯನ್ನು ಭೇದಿಸಿ, ಹೊರ ಗೋಡೆಗಳಿಗೆ ಹಾನಿ ಉಂಟುಮಾಡಿ, ಕಾರಾಗೃಹಗಳ ಒಳನುಗ್ಗಿ ಭಯೋತ್ಪಾದಕರನ್ನಾಗಲೀ ಅಥವಾ ಘೋರ ಅಪರಾಧಿಗಳನ್ನಾಗಲೀ ಬಿಡಿಸಿಕೊಂಡು ಹೋಗುವಂತಹ ಘಟನೆಗಳು ದೇಶದ ಹಲವಡೆ ಕಂಡುಬರುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಪ್ರತಿ ಕ್ಷಣ, ಪ್ರತಿ ದಿನ ತಮ್ಮ ಪಹರೆಗಳಲ್ಲಿ ಸಿಬ್ಬಂದಿಗಳು ಯಾವುದೇ ರೀತಿಯ ಅನಾಹುತಗಳಾಗದಂತೆ ಕರ್ತವ್ಯ ಮುಗಿದರೆ ಸಾಕು ಎನ್ನುವಂತಹ ಮನಃಸ್ಥಿತಿಯಲ್ಲಿದ್ದಾರೆ. ಕಿಡಿಗೇಡಿಗಳು ಹೊರಗಿನಿಂದ ಕಾರಾಗೃಹ ಮುಖ್ಯ ಗೋಡೆಯ ಒಳಕ್ಕೆ ಮಾದಕ ವಸ್ತುಗಳಂತಹ ನಿಷೇದಿತ ವಸ್ತುಗಳನ್ನು ಎಸೆಯುವುದನ್ನು ತಡೆಯಬೇಕಾಗಿದೆ. ಇದನ್ನು ನಿಯಂತ್ರಿಸಲು ಹೆಚ್ಚಿನ ಕಾರಾಗೃಹ ಸಿಬ್ಬಂದಿಯ ಅವಶ್ಯಕತೆ ಇರುತ್ತದೆ ಎಂದು ರಾಷ್ಟ್ರೀಯ ಮಾನವ ಹಕ್ಕು ಆಯೋಗ (2016) ಅಭಿಪ್ರಾಯ ವ್ಯಕ್ತಪಡಿಸಿರುತ್ತದೆ. ಕಾರಾಗೃಹಗಳಲ್ಲಿ ಸಿಬ್ಬಂದಿಗಳ ಕೊರತೆಯಿಂದ ಮೊಬೈಲ್, ಗಾಂಜಾ ಮುಂತಾದ ಮಾದಕ ವಸ್ತುಗಳಂತಹ ನಿಷೇಧಿತ ವಸ್ತುಗಳನ್ನು ಚೆಂಡು ಮತ್ತು ಇನ್ನಿತರ ವಸ್ತುಗಳ ಮುಖಾಂತರ ಕಾರಾಗೃಹಗಳ ಒಳಭಾಗಕ್ಕೆ ಎಸೆಯುತ್ತಿರುವುದರಿಂದ ಅವು ನೇರವಾಗಿ ಬಂದಿಗಳ ಕೊಠಡಿಗಳ ಆವರಣದಲ್ಲಿ ಬೀಳುವುದರಿಂದ ನಿಷೇಧಿತ ವಸ್ತುಗಳು ಸುಲಭವಾಗಿ ಬಂದಿಗಳಿಗೆ ದೊರೆಯುತ್ತಿರುವ ಕೆಲವು ಘಟನೆಗಳು ಕೂಡ ಕಂಡುಬಂದಿದೆ._

ಸುಧಾರಣಾ ಸಿಬ್ಬಂದಿವರ್ಗದವರು ತಮ್ಮ ಕಾರ್ಯನಿರ್ವಹಣಾ ಶೈಲಿ ಮತ್ತು ವೃತ್ತಿ ಜೀವನದ ಬಗ್ಗೆ ಕನಿಷ್ಟ ಧನಾತ್ಮಕ ಹಾಗೂ ಬಂದಿಗಳ ಕುರಿತಾಗಿ ತೀರ ಋಣಾತ್ಮಕವಾದ ದೃಷ್ಟಿಕೋನವನ್ನು ಹೊಂದಿರುವುದು ಮಾತ್ರವಲ್ಲದೆ ಬಂದಿಗಳ ಕುರಿತಾಗಿ ವಿರೋಧಭಾಸದಿಂದ ಕೂಡಿದ ಮನೋಭಾವವು ಅವರಲ್ಲಿ ಕ್ರಮೇಣ ವೃದ್ಧಿಸುತ್ತಿದೆ (Crewe, Liebling & Hulley, 2011). ಬಂದಿಗಳು ಮತ್ತು ಸಿಬ್ಬಂದಿವರ್ಗದವರ ನಡುವೆ ಉತ್ತಮವಾದ ಹೊಂದಾಣಿಕೆಯಿದ್ದಾಗ ಮಾತ್ರ ಕಾರಾಗೃಹದ ಆಡಳಿತಾತ್ಮಕ ವ್ಯವಸ್ಥೆಯು ಯಾವುದೇ ಅಡ್ಡಿ ಆಂತಂಕಗಳಿಲ್ಲದೆ ಯಶಸ್ವಿಯಾಗಿ ಸಾಗುತ್ತದೆ.

ಕಾರಾಗೃಹಕ್ಕೆ ದಾಖಲಾಗುವ ಪ್ರತಿಯೊಬ್ಬ ಬಂದಿಯ ಮನಃಸ್ಥಿತಿ ಬೇರೆ ಬೇರೆಯಾಗಿದ್ದು, ಮಾನಸಿಕವಾಗಿ ನೊಂದ ಬಂದಿಗಳು ಕೂಡ

ದಾಖಲಾಗಿರುತ್ತಾರೆ. ಸುಮಾರು ೫೦–೧೦೦ ಬಂದಿಗಳ ಪ್ರಭಾರವನ್ನು ಹೊಂದಿರುವ ಒಬ್ಬ ಸಿಬ್ಬಂದಿಯು ಅವರೆಲ್ಲರನ್ನೂ ಒಂದೇ ನೋಟದಲ್ಲಿ ನೋಡಲಾಗದಿದ್ದರೂ ಪರಿಸ್ಥಿತಿಗೆ ಅನುಗುಣವಾಗಿ ಪ್ರಭಾರ ಹೊಂದಿರಲೇಬೇಕಾದ ಅನಿವಾರ್ಯತೆಯಿದೆ. ಇಂತಹ ಸಮಯದಲ್ಲಿ ಸಿಬ್ಬಂದಿಗಳ ನಿಯಂತ್ರಿತ ವ್ಯಾಪ್ತಿಯಿಂದ ತಪ್ಪಿಸಿಕೊಳ್ಳಲು ಅನೇಕ ಕಾರಣಗಳನ್ನು ಹೇಳಿ ಬಂದಿಗಳು ಬ್ಯಾರಕ್ ನಿಂದ ಹೊರಬರುತ್ತಾರೆ. ಅವರಿಗೆ ಸಂದರ್ಶನ, ಆಸ್ಪತ್ರೆ, ನ್ಯಾಯಾಲಯ, ವಿ. ಸಿ. ಕೋರ್ಟ್, ಕಛೇರಿ ಕೆಲಸಗಳು, ಲೈಬ್ರರಿ, ಕಾರ್ಖಾನೆ, ಉಪಾಹಾರ ಗೃಹ ಮುಂತಾದ ಕಡೆಗಳಿಗೆ ಹೋಗಬೇಕಾಗುತ್ತದೆ. ಈ ಸಮಯದಲ್ಲಿ ಒಬ್ಬ ಸಿಬ್ಬಂದಿಯು ಎಷ್ಟು ಜನರ ಮಾಹಿತಿಯನ್ನು ಸಂಗ್ರಹಿಸಬಲ್ಲ ಎಂಬುದು ಎಲ್ಲರಿಗೂ ತಿಳಿದಿರುವ ವಿಷಯವಾಗಿದೆ. ಹಾಗೂ ಅವರು ಬ್ಯಾರಕ್‌ಗಳಲ್ಲಿಯೇ ರಾತ್ರಿ ವೇಳೆ ಅಥವಾ ಯಾವುದೇ ಸಮಯದಲ್ಲಿ ಸಿಬ್ಬಂದಿಗಳ ಕಣ್ಣು ತಪ್ಪಿಸಿ ಅವರು ಉಪಯೋಗಿಸುವ ಬಟ್ಟೆ, ಬೆಡ್‌ಶೀಟ್‌ಗಳಿಂದಲೇ ಹಗ್ಗ ಮಾಡಿಕೊಂಡು ಆತ್ಮಹತ್ಯೆಗೆ ಶರಣಾಗುತ್ತಾರೆ. ಈ ಘಟನೆಯಿಂದ ಅಲ್ಲಿ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಯು ಅಸಹಾಯಕನಾಗಿ ಇಲಾಖೆಯಿಂದ ನಿಲಂಬನಕ್ಕೊಳಗಾಗಿ ಮಾನಸಿಕವಾಗಿ, ಆರ್ಥಿಕವಾಗಿ ಹಿಂಸೆ ಅನುಭವಿಸುತ್ತಿದ್ದಾರೆ.

ಕರ್ನಾಟಕ ರಾಜ್ಯದ ವಿವಿಧ ಕಾರಾಗೃಹಗಳಲ್ಲಿ ಹಾಲಿ ಸುಮಾರು 13,100 ಕ್ಕೂ ಅಧಿಕ ಬಂದಿಗಳು ಇದ್ದು ಅವರ ಪಾಲನೆ, ಮನಃಪರಿವರ್ತನೆ ಮತ್ತು ಪುನರ್ವಸತಿ ಕೆಲಸಗಳನ್ನು ಇಲಾಖೆಯು ನಿರ್ವಹಿಸುತ್ತಿದೆ. ಕಾರಾಗೃಹಕ್ಕೆ ದಾಖಲಾಗುವ ಹೆಚ್ಚಿನ ಬಂದಿಗಳು ಸಮಾಜಕ್ಕೆ ಬೇಡವಾದವರು, ರೂಢಾಪರಾಧಿಗಳು, ರೌಡಿಗಳು, ಮೋಸಗಾರರಂತಹ ಅಪರಾಧಿಗಳೇ ಹೆಚ್ಚಿನ ಸಂಖ್ಯೆಯಲ್ಲಿರುತ್ತಾರೆ. ಸದರಿ ಬಂದಿಗಳ ಭದ್ರತೆ ಮತ್ತು ಮನಃಪರಿವರ್ತನೆ ಮಾಡುವುದು ಒಂದು ಸವಾಲಿನ ಕೆಲಸವಾಗಿದೆ. ಇಂತಹ ಕೆಲಸ ನಿರ್ವಹಿಸುವಾಗ ಸಿಬ್ಬಂದಿಗಳು ಮತ್ತು ಅಧಿಕಾರಿಗಳು ಬಂದಿಗಳಿಂದ ಅನುಭವಿಸುವ ಮಾನಸಿಕ ಹಿಂಸೆ, ನಿಂದನೆ, ಹಲ್ಲೆಗಳು, ಒತ್ತಡಗಳು ಸಾಮಾನ್ಯವಾಗಿವೆ. ಇದೇ ಅಲ್ಲದೇ ಬಂದಿಗಳು, ಸಿಬ್ಬಂದಿಗಳು ಮತ್ತು ಅಧಿಕಾರಿಗಳ ಮಧ್ಯೆ ವೈಷಮ್ಯ ಬೆಳೆಸಿ ಪರಸ್ಪರ ಆರೋಪಗಳನ್ನು ಕಟ್ಟಿ ತಮ್ಮ ಹತೋಟಿಯಲ್ಲಿಟ್ಟುಕೊಳ್ಳಲು ಪ್ರಯತ್ನಿಸುವ ಕೆಲಸಗಳನ್ನು ನಿರಂತರವಾಗಿ ಮಾಡುತ್ತಿರುತ್ತಾರೆ. ಈ ಎಲ್ಲವನ್ನೂ ಸಂಬಾಳಿಸಿಕೊಂಡು ಹೊಟ್ಟೆಪಾಡಿಗಾಗಿ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಗಳು ಬಂದಿಗಳ ಮೇಲೆ ಬಲ ಪ್ರಯೋಗ ಮಾಡುವಂತಿಲ್ಲ. ಅವರನ್ನು ನಿಂದಿಸುವಂತಿಲ್ಲ. ಒಂದು ವೇಳೆ ಬಂದಿಗಳು ಸಾಕ್ಷ್ಯ ಸಮೇತ ಸಿಕ್ಕಿ ಬಿದ್ದು, ಅವರ ಮೇಲೆ ಮತ್ತೊಂದು ಪ್ರಕರಣ/ದೂರು ದಾಖಲಿಸಿದರೆ ಈಗಾಗಲೇ ಜೈಲು ಶಿಕ್ಷೆ ಅನುಭವಿಸುತ್ತಿರುವವರು, ಮತ್ತೆ ಶಿಕ್ಷೆಯಾದರೆ ಹಿಂದಿನ ಶಿಕ್ಷೆ ಅವಧಿಯೊಂದಿಗೆ ಸದರಿ ಶಿಕ್ಷೆಯು ವಿಲೀನವಾಗಿ (Cuncurent) ಶಿಕ್ಷೆ ತೀರುವುದರಿಂದ ಶಿಕ್ಷೆಯ ಭಯವೂ ಅವರಿಗೆ ಇಲ್ಲವಾಗಿದ್ದು, ಇದರ ಲಾಭ ಪಡೆದ ಬಂದಿಗಳು ಸಿಬ್ಬಂದಿಗಳಿಗೆ ನಿರಂತರವಾಗಿ ಕಿರುಕುಳ ನೀಡುತ್ತಲೇ ಇರುತ್ತಾರೆ. ಕೆಲವೊಮ್ಮೆ ಕಾರಾಗೃಹದಲ್ಲಿ ದಾಖಲಾಗುವ ವಿರೋಧಿ ಗುಂಪುಗಳು ಜಗಳವಾದಾಗ ಅವುಗಳನ್ನು ಬಿಡಿಸಲು, ಮತ್ತು ಅವರನ್ನು ನಿಯಂತ್ರಿಸಲು ಸಹಾ ಕಷ್ಟ ಸಾಧ್ಯವಾಗಿರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಕೆಲವೊಮ್ಮೆ ಅಧಿಕಾರಿ/ಸಿಬ್ಬಂದಿಗಳಿಗೆ ಸಹಾ ಹೊಡೆತಗಳು, ಪೆಟ್ಟು ಬಿದ್ದಿರುವ ಸನ್ನಿವೇಶಗಳೂ ಸಹ ಇವೆ. ಸಿಬ್ಬಂದಿಗಳ ಆತ್ಮರಕ್ಷಣೆಗಾಗಿ ಯಾವುದೇ ರಕ್ಷಣಾ ಆಯುಧಗಳು ಇಲ್ಲವಾಗಿದೆ. ಇಷ್ಟೆಲ್ಲಾ ಸಮಸ್ಯೆಗಳಿದ್ದರೂ ಸಹ ತಾಳ್ಮೆ ಕಳೆದುಕೊಳ್ಳದೇ ಕಾರಾಗೃಹ ಇಲಾಖೆಯ ಹಿತದೃಷ್ಟಿಯಿಂದ ಧೈರ್ಯದಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಕಾರಾಗೃಹ ಸಿಬ್ಬಂದಿವರ್ಗದವರು ತಮ್ಮ ವೈಯಕ್ತಿಕ ಸಮಸ್ಯೆಗಳ ನಿರ್ವಹಣೆ ಹಾಗೂ ಅದಕ್ಕೆ ಸಂಬಂಧಿಸಿದಂತೆ ಸೂಕ್ತ ಪರಿಹಾರವನ್ನು ಕಂಡುಕೊಳ್ಳುವಲ್ಲಿ ವಿಫಲರಾಗಿದ್ದಾರೆ. ಇವರು ತಮ್ಮ ವೈಯಕ್ತಿಕ ಹಾಗೂ ವೃತ್ತಿ ಜೀವನದಲ್ಲಿ ಸಕಾರಾತ್ಮಕ ಹಾಗೂ ಸ್ಪಷ್ಟ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಾಗದ ಮನಃಸ್ಥಿತಿಯಲ್ಲಿದ್ದಾರೆ. ಅವರಲ್ಲಿ ಯಾವುದೇ ನಿರ್ದಿಷ್ಟ ಸಂಗತಿಯ ಕುರಿತು ವಿಮರ್ಶಾತ್ಮಕವಾಗಿ ಆಲೋಚಿಸುವ ಪ್ರಾವೀಣ್ಯತೆ ದುರ್ಬಲಗೊಳ್ಳುತ್ತಿದೆ. ಸೃಜನಾತ್ಮಕ ಚಿಂತನೆ ಹಾಗೂ ಹೃದಯ ವೈಶಾಲ್ಯತೆಯ ಮನೋಭಾವ ಕ್ಷೀಣಿಸುತ್ತಿದೆ. ಪರಿಣಾಮಕಾರಿಯಾದ ಸಂವಹನ ಮತ್ತು ಅಭಿವ್ಯಕ್ತಿ ಕಲೆಯ ಕೊರತೆಯು ಅವರಲ್ಲಿ ಎದ್ದು ಕಾಣುತ್ತಿದೆ. ಕುಟುಂಬದವರೊಂದಿಗೆ, ಬಂಧು–ಮಿತ್ರರೊಂದಿಗೆ, ಸಹೋದ್ಯೋಗಿಗಳೊಂದಿಗೆ ಹಾಗೂ ನೆರೆಹೊರೆಯವರೊಂದಿಗೆ ಒಳ್ಳೆಯ ಸ್ನೇಹ ಸಂಬಂಧದಿಂದ ದೀರ್ಘವಾಗಿ ವ್ಯವಹರಿಸುವ ಮಧುರ ಭಾಂಧವ್ಯವನ್ನು ಕಳೆದುಕೊಳ್ಳುತ್ತಿದ್ದಾರೆ. ಇತರರ ಸಾಮರ್ಥ್ಯ, ಭಾವನೆ, ವ್ಯಕ್ತಿತ್ವವನ್ನು ತುಲನೆ ಮಾಡುವಂತಹ ಬುದ್ದಿವಂತಿಕೆಯ ಮಟ್ಟ ಕ್ಷೀಣಿಸುತ್ತಿದೆ. ಮಹಿಳಾ ಸುಧಾರಣಾ ಸಿಬ್ಬಂದಿವರ್ಗದವರು ಪುರುಷರಿಗಿಂತ ಉನ್ನತ ಮಟ್ಟದ ವೃತ್ತಿ ಸಂಬಂಧಿತ ವ್ಯಕ್ತಿಗತ ಸಾಧನ ಪ್ರಜ್ಞೆಯನ್ನು ವ್ಯಕ್ತಪಡಿಸಿದ್ದಾರೆ (Carlson, Anson & Thomas, 2003). ಬಂದಿಗಳನ್ನು ಯಶಸ್ವಿಯಾಗಿ ನಿರ್ವಹಿಸಲು ಸಿಬ್ಬಂದಿವರ್ಗದವರಿಂದ ಸಾಧ್ಯವಾಗದ ಸನ್ನಿವೇಶ ಇಂದು ನಿರ್ಮಾಣವಾಗುತ್ತಿದೆ. ಕಾರಾಗೃಹಗಳಲ್ಲಿನ ಸ್ಥಿತಿಗತಿಗಳನ್ನು ಗಮನಿಸಿದರೆ ಸಿಬ್ಬಂದಿವರ್ಗದವರೇ ಹೆಚ್ಚಾಗಿ ಎಲ್ಲಾ ಮೂಲಗಳಿಂದ ತುಳಿತಕ್ಕೊಳಗಾಗಿದ್ದಾರೆ ಎಂದು ತಿಳಿದು ಬರುತ್ತದೆ.

ಕಾರಾಗೃಹಗಳಲ್ಲಿ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಗಳ ಕೆಲಸದ ಸಮಯವು ಬೇರೆ ಇಲಾಖೆಗಳಿಗಿಂತ ವಿಭಿನ್ನವಾಗಿದ್ದು, ಮೂರು ಪಾಳಿಗಳಲ್ಲಿ ಕರ್ತವ್ಯ ನಿರ್ವಹಿಸಬೇಕಿದೆ. ಬೆಳಗಿನ ಪಹರೆ 06:00 ರಿಂದ 01:30, ಮಧ್ಯಾಹ್ನದ ಪಹರೆ 01:30 ರಿಂದ ರಾತ್ರಿ ಜೈಲಿನ ಬೀಗಮುದ್ರೆ ವರೆಗೆ ಹಾಗೂ ರಾತ್ರಿ ಪಹರೆ ಸಂಜೆ ೦೬:೦೦ ರಿಂದ ಬೆಳಗ್ಗೆ ಜೈಲಿನ ಬೀಗಮುದ್ರೆ ತೆರೆಯುವವರೆಗೆ ವಾರ್ಡರ್, ಹೆಡ್‌ವಾರ್ಡರ್ ಹಾಗೂ ಚೀಫ್ ವಾರ್ಡರ್ ಸಿಬ್ಬಂದಿಗಳು 03 ಪಾಳಿಯಲ್ಲಿ ಕರ್ತವ್ಯ ನಿರ್ವಹಿಸಬೇಕಾಗಿದೆ.

ಕಾರಾಗೃಹಗಳಲ್ಲಿ ಬಂದಿಗಳನ್ನು ಅನೇಕ ತುರ್ತು ಸಮಯದಲ್ಲಿ ವೈದ್ಯಕೀಯ ಚಿಕಿತ್ಸೆಗಾಗಿ ಹೊರ ಆಸ್ಪತ್ರೆಗಳಿಗೆ ಕಳುಹಿಸಲಾಗುತ್ತದೆ. ರಾಜ್ಯದ ವಿವಿಧ ಕಾರಾಗೃಹಗಳಿಂದ ಹೆಚ್ಚಿನ ಚಿಕಿತ್ಸೆಗಾಗಿ ಬಂದಿಗಳು ದಾಖಲಾಗುವುದರಿಂದ ಕೂಡಲೇ ಅವರನ್ನು ಹೊರ ಆಸ್ಪತ್ರೆಗಳಿಗೆ ಕಳುಹಿಸಿ ದಾಖಲಿಸಬೇಕಾಗುತ್ತದೆ. ತುರ್ತು ಸಮಯಕ್ಕೆ ಸೂಕ್ತ ಬೆಂಗಾವಲು ದೊರೆಯದೇ ಬಂದಿಗಳ ಪ್ರಾಣರಕ್ಷಣೆ ಮತ್ತು ಆರೋಗ್ಯದ ಹಿತದೃಷ್ಟಿಯಿಂದ ಕಾರಾಗೃಹ ಇಲಾಖೆಯ ಸಿಬ್ಬಂದಿಗಳನ್ನು ತತಕ್ಷಣವೇ ನಿಯೋಜಿಸಬೇಕಾಗುತ್ತದೆ. ಇದರಿಂದ ಕಾರಾಗೃಹದ ಆಡಳಿತಕ್ಕೆ ಸಿಬ್ಬಂದಿವರ್ಗದವರ ಕೊರತೆಯಿಂದ ತೀವ್ರ ತೊಂದರೆಯಾಗುತ್ತದೆ. ಆದ್ದರಿಂದ ಹೊರ ಆಸ್ಪತ್ರೆಗೆ ಬಂದಿಗಳನ್ನು ದಾಖಲಿಸಿದಾಗ ಸೂಕ್ತ ಸಮಯಕ್ಕೆ ದಾಖಲಾದ ಆಸ್ಪತ್ರೆಗೆ ಬೆಂಗಾವಲು ಸಿಬ್ಬಂದಿಗಳನ್ನು ಮೀಸಲು ಆರಕ್ಷಕ ಪಡೆಯಿಂದ ನಿಯೋಜಿಸದ ಕಾರಣ ಹೊರ ಆಸ್ಪತ್ರೆಗಳಲ್ಲಿ ಹೆಚ್ಚಿನ ಭದ್ರತೆ ಸಿಗದೇ ಕಾರಾಗೃಹ ಸಿಬ್ಬಂದಿಗಳ ಬೆಂಗಾವಲಿನಿಂದ ಸಹ ಕೆಲವು ಬಂದಿಗಳು ಪರಾರಿಯಾಗಿರುವ ಪ್ರಕರಣಗಳು ನಡೆದಿರುತ್ತವೆ.

ಕಾರಾಗೃಹ ಇಲಾಖೆಯಲ್ಲಿ ಸ್ವಜನ ಪಕ್ಷಪಾತ, ಅಧಿಕಾರಿಗಳ ಅವೈಜ್ಞಾನಿಕ ತೀರ್ಮಾನಗಳು, ಮಿತಿಮೀರಿದ ಭ್ರಷ್ಟಾಚಾರ, ಸಿಬ್ಬಂದಿವರ್ಗದವರ ಅಧಿಕಾರವನ್ನು ಮೊಟಕುಗೊಳಿಸುವುದು, ಅಧಿಕಾರಿಗಳು ಮತ್ತು ಸಿಬ್ಬಂದಿವರ್ಗದವರ ನಡುವೆ ಸಮನ್ವಯತೆ ಇಲ್ಲದಿರುವುದು, ದುರ್ಬಲ ಆಡಳಿತ ನಿರ್ವಹಣೆ,

ಕಾರ್ಯನಿರ್ವಹಣೆಯಲ್ಲಿನ ಅಧಿಕ ಒತ್ತಡ ಹಾಗೂ ಬಂದಿಗಳು, ಅಧಿಕಾರಿಗಳು ಮತ್ತು ಸಹೋದ್ಯೋಗಿಗಳೊಂದಿಗಿನ ನಿರಂತರ ಸಂಘರ್ಷದ ಫಲವಾಗಿ ಕಾರಾಗೃಹಗಳ ಸಿಬ್ಬಂದಿವರ್ಗದವರು ದೈಹಿಕವಾಗಿ ಮತ್ತು ಮಾನಸಿಕವಾಗಿ ಜರ್ಜರಿತರಾಗುತ್ತಿದ್ದಾರೆ. ಅಲ್ಲದೆ ಬಂದಿಗಳಿಂದಾಗುತ್ತಿರುವ ಶೋಷಣೆಯೂ ಸಹ ಅಪಾಯಕಾರಿ ಮಟ್ಟವನ್ನು ತಲುಪುತ್ತಿದೆ (Dowden & Tellier, 2004; Slate, Ronald & Risdon, 1997).

ಸ್ವಯಂ ನಿಗ್ರಹಣಶಕ್ತಿ ಹಾಗೂ ವಿಮರ್ಶಾತ್ಮಕವಾಗಿ ಚಿಂತಿಸುವ ಸಾಮರ್ಥ್ಯ ಕಾರಾಗೃಹ ಸುಧಾರಣಾ ಸಿಬ್ಬಂದಿವರ್ಗದವರಲ್ಲಿ ದುರ್ಬಲಗೊಳ್ಳುತ್ತಿದೆ (World Health Organization, 2008). ವಿಶ್ವ ಆರೋಗ್ಯ ಸಂಸ್ಥೆಯು ಬಿಡುಗಡೆ ಮಾಡಿರುವ ದಾಖಲಾತಿಯ ಪ್ರಕಾರ ಬಂದಿಗಳ ಮಾನಸಿಕ ರೋಗಗಳು ಪರೋಕ್ಷವಾಗಿ ಸಿಬ್ಬಂದಿವರ್ಗದವರ ಮಾನಸಿಕ ಒತ್ತಡಕ್ಕೆ ನೇರವಾಗಿ ಕಾರಣವಾಗುತ್ತಿದೆ. ವಿಶ್ವ ಆರೋಗ್ಯ ಸಂಸ್ಥೆಯು ಕಾರಾಗೃಹದ ರಕ್ಷಣಾ ಸಿಬ್ಬಂದಿವರ್ಗದವರ ಮಾನಸಿಕ ಸ್ಥಿತಿಗತಿಗಳ ಮೇಲೆ ತನ್ನ ಗಮನವನ್ನು ಇಂದು ಹೆಚ್ಚಾಗಿ ಕೇಂದ್ರೀಕರಿಸುತ್ತಿದೆ. ವಿಶ್ವ ಆರೋಗ್ಯ ಸಂಸ್ಥೆಯು ಕಾರಾಗೃಹ ಸಿಬ್ಬಂದಿವರ್ಗದವರ ಮಾನಸಿಕ ಆರೋಗ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಸಮರ್ಥ ತರಬೇತಿಯನ್ನು ನೀಡುವ ಕಾರ್ಯಕ್ರಮಗಳನ್ನು ಹಲವು ದೇಶಗಳಲ್ಲಿ ಯಶಸ್ವಿಯಾಗಿ ಹಮ್ಮಿಕೊಂಡಿದೆ. ಇಂತಹ ತರಬೇತಿಗಳು ಮಾನಸಿಕ ದೌರ್ಬಲ್ಯಗಳ ನಿರ್ವಹಣೆಯ ಬಗೆಗಿನ ಜ್ಞಾನವನ್ನು ಸಿಬ್ಬಂದಿವರ್ಗದವರಲ್ಲಿ ವೃದ್ಧಿಸುವುದು ಮಾತ್ರವಲ್ಲದೆ, ಅವರುಗಳ ಧನಾತ್ಮಕ ಮನೋಸಾಮರ್ಥ್ಯದ ಬೆಳವಣಿಗೆಗೆ ಕೂಡ ಪೂರಕವಾಗಿದೆ. ಹೆಚ್ಚಿನ ಮಾನಸಿಕ ಒತ್ತಡದಿಂದ ಸಿಬ್ಬಂದಿವರ್ಗದವರು ಆತ್ಮಹತ್ಯೆಗೆ ಒಳಗಾಗುವುದನ್ನು ತಡೆಗಟ್ಟಲು ಈ ರೀತಿಯ ತರಬೇತಿಗಳು ಅತ್ಯಂತ ಉಪಯುಕ್ತವಾಗಿದೆ.

ಪ್ರಸ್ತುತ ಕಾರಾಗೃಹಗಳಲ್ಲಿ ಹೆಚ್ಚಿನ ಬಂದಿಗಳು ದಾಖಲಾಗುತ್ತಿದ್ದು, ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಬಂದಿಗಳು ದಾಖಲಾಗುವ ಸಂಭವವಿದ್ದು, ದೈನಂದಿನ ಆಡಳಿತ ಮತ್ತು ಭದ್ರತೆ ಹಿತದೃಷ್ಟಿಯಿಂದ ಬಂದಿಗಳ ದಾಖಲಾತಿಯ ಸಂಖ್ಯೆಗೆ ಅನುಗುಣವಾಗಿ ವಿವಿಧ ವೃಂದದ ಕಾರ್ಯನಿರ್ವಾಹಕ, ಲಿಪಿಕ, ನಿಯೋಜನೆ ಮತ್ತು ಇತರ ಅಧಿಕಾರಿ ಸಿಬ್ಬಂದಿಗಳನ್ನು ಸೃಜನೆ ಮಾಡುವ ಅಗತ್ಯವಿರುತ್ತದೆ. ಕರ್ನಾಟಕ ಕಾರಾಗೃಹಗಳ ಕೈಪಿಡಿ 1978 ರ ನಿಯಮ 414 ರಲ್ಲಿ ಪ್ರತಿ 10 ಬಂದಿಗಳಿಗೆ 01 ಸಂಖ್ಯೆ ವೀಕ್ಷಕರ ಅನುಪಾತದಲ್ಲಿ ಕಾರಾಗೃಹದಲ್ಲಿ ಸಿಬ್ಬಂದಿಗಳು ಕಾರ್ಯನಿರ್ವಹಿಸಬೇಕೆಂದು ತಿಳಿಸಿರುತ್ತದೆ. ಈ ಅನುಪಾತದಲ್ಲಿ ಪ್ರತಿ 10 ಬಂದಿಗಳಿಗೆ ದಿನಕ್ಕೆ 03 ಪಾಳಿಯ (ಶಿಪ್ಟ್) ಪ್ರಕಾರ ಕಾವಲು ಸಿಬ್ಬಂದಿಗಳ ಅತ್ಯವಶ್ಯಕತೆ ಇರುತ್ತದೆ. ನೂತನ ಕಾರಾಗೃಹಗಳ ಕೈಪಿಡಿ ಪ್ರಕಾರ ಕಾರಾಗೃಹದ ಭದ್ರತೆ ಮತ್ತು ಆಡಳಿತದ ಹಿತದೃಷ್ಟಿಯಿಂದ ಪ್ರತಿ 06 ಬಂದಿಗಳಿಗೆ 01 ಸಂಖ್ಯೆ ವೀಕ್ಷಕ ಸಿಬ್ಬಂದಿಯ ಅವಶ್ಯಕತೆ ಇರುತ್ತದೆಂದು ತಿಳಿಸಲಾಗಿದೆ. ಈ ಹಿನ್ನಲೆಯಲ್ಲಿ ದೇಶದ ಇತರ ರಾಜ್ಯಗಳ ಕಾರಾಗೃಹಗಳಲ್ಲಿ ಬಂದಿಗಳ ಸಂಖ್ಯೆಗೆ ಅನುಗುಣವಾಗಿ ಕಾರಾಗೃಹ ಸಿಬ್ಬಂದಿಗಳ ಹುದ್ದೆಗಳನ್ನು ಸೃಜಿಸಿ ಕರ್ತವ್ಯಕ್ಕೆ ನಿಯೋಜಿಸಲಾಗಿರುತ್ತದೆ.

ಕಾರಾಗೃಹಗಳ ಭದ್ರತೆಯನ್ನು ಹೆಚ್ಚಿಸುವ ಸಂಬಂಧ ಕರ್ನಾಟಕ ರಾಜ್ಯ ಸರ್ಕಾರವು ರಚಿಸಲ್ಪಟ್ಟ ಹೈ–ಪವರ್ ಕಮಿಟಿಯು (2015-16) ಸಂಕ್ಷಿಪ್ತವಾಗಿ ಕಾರಾಗೃಹ ಇಲಾಖೆಯ ಕುಂದು ಕೊರತೆಗಳ ಬಗ್ಗೆ ಅಧ್ಯಯನ ಮಾಡಿ ಸರ್ಕಾರಕ್ಕೆ ಹಾಗೂ ಇಲಾಖೆಗೆ ಶಿಫಾರಸ್ಸು ಮಾಡಿದ ವರದಿಯಲ್ಲಿ ರಾಜ್ಯ ವ್ಯಾಪ್ತಿ ತುರ್ತಾಗಿ 3500 ಕಾರಾಗೃಹ ಅಧಿಕಾರಿ/ಸಿಬ್ಬಂದಿಗಳ ನೇಮಕ ಅವಶ್ಯಕವಿರುವುದಾಗಿ ಸೂಚಿಸಿರುತ್ತಾರೆ. ದಿನಾಂಕ: 19-03-2014 ರಂದು ಸರ್ಕಾರದ ಕಾರ್ಯದರ್ಶಿಗಳು (ಪಿ.ಸಿ.ಎ.ಎಸ್) ಇವರ ಅಧ್ಯಕ್ಷತೆಯಲ್ಲಿ ಕಾರಾಗೃಹ ಇಲಾಖೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ನಡೆದ ಸಭೆಯಲ್ಲಿ ಕಾರಾಗೃಹಗಳ ಕೈಪಿಡಿ 1978 ರನ್ವಯ ಪ್ರತಿ 10 ಬಂದಿಗಳಿಗೆ ತಲಾ ೦೧ ನೌಕರರ ಅನುಪಾತದಲ್ಲಿ ಅಗತ್ಯವಿರುವ ಸಿಬ್ಬಂದಿಗಳನ್ನು ಸೃಜನೆ ಮಾಡಲು ನಿರ್ಧರಿಸಿರುವುದು ಒಂದು ಉತ್ತಮ ಬೆಳವಣಿಗೆ.

ಕಾರಾಗೃಹಗಳಲ್ಲಿ ಸಿಬ್ಬಂದಿಗಳ ಕೊರತೆಯಿಂದಾಗಿ ಕಛೇರಿ ವಿಭಾಗಗಳಲ್ಲಿಯೂ ಸಹ ಬಂದಿಗಳು ಕೆಲಸ ಮಾಡುತ್ತಿರುವುದರಿಂದ ಸಂಸ್ಥೆಯ ಆಡಳಿತಾತ್ಮಕ ವಿಷಯಗಳನ್ನು ತಿಳಿದುಕೊಂಡು ಒಳಗಿನ ಬಂದಿಗಳಿಗೆ ಮಾಹಿತಿ ನೀಡಿ ಅದಕ್ಕೆ ವಿರುದ್ಧವಾಗಿ ಅಥವಾ ಸದರಿ ಸುಗಮ ಆಡಳಿತವನ್ನು ಅಸ್ತವ್ಯಸ್ಥ ಮಾಡುವ ಉದ್ದೇಶದಿಂದ ಅನೇಕ ರೀತಿಯ ಯೋಜನೆ ರೂಪಿಸಿ ಆಡಳಿತಕ್ಕೆ ತೊಂದರೆಯನ್ನು ಉಂಟು ಮಾಡಲು ಹುನ್ನಾರ ನಡೆಸುತ್ತಾರೆ. ಆದ್ದರಿಂದ ತುರ್ತಾಗಿ ಕಾರ್ಯನಿರ್ವಾಹಕ ಮತ್ತು ಲಿಪಿಕ ಸಿಬ್ಬಂದಿಗಳ ನೇಮಕ ಅಗತ್ಯವಿದೆ. ಇಲಾಖಾ ಸಿಬ್ಬಂದಿಗಳ ಹೊರತಾಗಿ ಬಂದಿಗಳು ನಿರ್ವಹಿಸಿದರೆ ಮಾಹಿತಿ ಸೋರಿಕೆಯಾಗುವ ಸಂಭವವಿರುತ್ತದೆ. ಕಾರ್ಯನಿರ್ವಾಹಕ ಮತ್ತು ಲಿಪಿಕ ಸಿಬ್ಬಂದಿಗಳ ಸ್ಥರಗಳಲ್ಲಿ ಹುದ್ದೆಗಳ ಜೇಷ್ಠತೆಗೆ ಅನುಗುಣವಾಗಿ ಅನುಪಾತ ಹೊಂದಾಣಿಕೆ ಮಾಡಿಕೊಂಡು ಪಿರಮಿಡ್ ಆಕಾರದಲ್ಲಿ ರಚಿಸಲಾಗಿದ್ದು, ಕೆಳಸ್ಥರದಿಂದ ಮೇಲುಸ್ಥರದ ಹುದ್ದೆಗಳ ಅನುಪಾತಕ್ಕೆ ತಕ್ಕಂತೆ ಬಡ್ತಿ ಮತ್ತು ನೇಮಕಾತಿ ಮಾಡಿಕೊಳ್ಳಬಹುದಾಗಿದ್ದು, ಇದರಿಂದ ಕೆಳಸ್ಥರದ ಸಿಬ್ಬಂದಿಗಳಿಗೆ ತಮ್ಮ ಸೇವಾವಧಿಯಲ್ಲಿ ಕನಿಷ್ಠ 03 ಬಡ್ತಿಗಳಾದರೂ ದೊರಕುವಂತಾಗುತ್ತದೆ. ಕಾರಾಗೃಹ ಇಲಾಖೆಯ ಅಧಿಕಾರಿ/ಸಿಬ್ಬಂದಿ ಕೋಷ್ಠಕವು ಪಿರಮಿಡ್ ಆಧಾರದಲ್ಲಿಲ್ಲದೇ ಕೆಳಸ್ಥರದ ಅಧಿಕಾರಿ/ಸಿಬ್ಬಂದಿಗಳಿಗೆ ಸರಿಯಾದ ರೀತಿಯಲ್ಲಿ ಪದೋನ್ನತಿಗಳು ದೊರೆತಿರುವುದಿಲ್ಲ. ರಾಜ್ಯದ ಕಾರಾಗೃಹಗಳಲ್ಲಿರುವ ಬಂದಿಗಳ ಸಾಮಥ್ಯಕ್ಕೆ ಅನುಗುಣವಾಗಿ ಅಧಿಕಾರಿ/ಸಿಬ್ಬಂದಿಗಳ ಕೋಷ್ಠಕವನ್ನು ಪಿರಮಿಡ್ ಮಾದರಿಯಲ್ಲಿ ಹಂತ ಹಂತವಾಗಿ ರೂಪಿಸಿದಲ್ಲಿ ಮಾತ್ರ ಬದಲಾವಣೆ ಮಾಡಲು ಸಾಧ್ಯವಿದೆ. ಇಲ್ಲದಿದ್ದರೆ ಕೆಳ ಸ್ಥರದ ಅಧಿಕಾರಿ/ಸಿಬ್ಬಂದಿಗಳಿಗೆ ಯಾವುದೇ ಪದೋನ್ನತಿಗಳು ಸಿಗದೇ ನೇಮಕಗೊಂಡ ಹುದ್ದೆಯಲ್ಲಿಯೇ ನಿವೃತ್ತಿ ಹೊಂದಬೇಕಾಗುತ್ತದೆ. ಪ್ರತಿಯೊಬ್ಬರ ಸೇವಾ ಅವಧಿಯಲ್ಲಿ ಕನಿಷ್ಠ ಮೂರು ಬಡ್ತಿಗಳಾದರೂ ಸಿಗುವಂತೆ ಮಾಡಿ ಸಿಬ್ಬಂದಿಗಳಲ್ಲಿ ಚೈತನ್ಯ ಮೂಡಿಸುವುದು ಅಗತ್ಯವಿರುತ್ತದೆ.

ಕಾರಾಗೃಹ ಇಲಾಖೆಯಲ್ಲಿ ಸುಮಾರು ಐದಾರು ದಶಕಗಳಿಂದ ಬಂದಿಗಳಿಗೆ ಅನುಗುಣವಾಗಿ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಗಳ ಹುದ್ದೆಗಳನ್ನು ಸೃಜಿಸಿರುವುದಿಲ್ಲ. ಈ ಹಿನ್ನಲೆಯಲ್ಲಿ ಕೆಲವು ಅಹಿತಕರ ಘಟನೆಗಳು ಆಗ್ಗಿಂದಾಗ್ಗೆ ಮರುಕಳಿಸುತ್ತಿದ್ದು, ಸಿಬ್ಬಂದಿಗಳ ಕೊರತೆಯಿಂದ ಸದರಿ ಅಹಿತಕರ ಘಟನೆಗಳನ್ನು ಕಾರಾಗೃಹಗಳಲ್ಲಿ ನಿಯಂತ್ರಿಸಲು ಕಷ್ಟಕರವಾಗಿದ್ದು, ದಿನನಿತ್ಯದ ಆಡಳಿತದ ನಿರ್ವಹಣೆ ಮಾಡುವುದು ಸಹ ತುಂಬಾ ಕ್ಲಿಷ್ಟಕರವಾಗಿರುತ್ತದೆ. ಈ ಮೇಲ್ಕಂಡ ಎಲ್ಲಾ ಅಂಶಗಳಿಂದ ಪ್ರಸ್ತುತ ಕಾರಾಗೃಹ ಇಲಾಖೆಯನ್ನು ಉನ್ನತೀಕರಿಸುವುದು ಹಾಗೂ ಹುದ್ದೆಗಳ ಸೃಜನೆ ಮಾಡಿ ಆಡಳಿತ ಮತ್ತು ಭದ್ರತೆಯನ್ನು ಬಲಪಡಿಸುವ ಅಗತ್ಯತೆಯನ್ನು ಪರಿಗಣಿಸಿಕೊಂಡು, ನೂತನವಾಗಿ ಕಾರಾಗೃಹಗಳಲ್ಲಿ ಅಗತ್ಯವಿರುವ ಹುದ್ದೆಗಳನ್ನು ಬಂದಿಗಳ ಸಂಖ್ಯೆಗೆ ಅನುಗುಣವಾಗಿ ವಿವಿಧ ವೃಂದದ ಅಧಿಕಾರಿ/ಸಿಬ್ಬಂದಿಗಳನ್ನು ಸೃಜಿಸುವುದು ಅತ್ಯವಶ್ಯಕವಾಗಿದೆ.

**ಇಲಾಖೆಯಲ್ಲಿ ನಾಲ್ಕು ವಿವಿಧ ವೃಂದದ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ಸೃಜಿಸಬೇಕಾಗಿದೆ. ಅವುಗಳೆಂದರೆ,**

ಚಿ. ಕಾರ್ಯನಿರ್ವಾಹಕ ಅಧಿಕಾರಿ/ಸಿಬ್ಬಂದಿಗಳ ವೃಂದ.

ಛ. ಲಿಪಿಕ ಅಧಿಕಾರಿ/ಸಿಬ್ಬಂದಿಗಳ ವೃಂದ.

ಛಿ. ನಿಯೋಜಿತ ಅಧಿಕಾರಿ/ಸಿಬ್ಬಂದಿಗಳ ವೃಂದ.

ಜ. ಇತರೆ ಸಿಬ್ಬಂದಿಗಳ ವೃಂದ.

**ತಾಲಿಕೆ ೧:** ರಾಜ್ಯದ ವಿವಿಧ ಶ್ರೇಣಿಯ ಕಾರಾಗೃಹಗಳ ವಿಂಗಡಣೆ ಮತು ಅಧಿಕೃತ ಸ್ಥಳಾವಕಾಶ.

| **ಕ್ರಮ ಸಂಖ್ಯೆ** | **ಕಾರಾಗೃಹ ಶ್ರೇಣಿ** | **ಸರಾಸರಿ ಬಂದಿಗಳ ಸಂಖ್ಯೆ** |
|---|---|---|
| ೧. | ಕೇಂದ್ರ ಕಾರಾಗೃಹ | > ೧೦೦೦ |
| ೨. | ಜಿಲ್ಲಾ ಕಾರಾಗೃಹ ವರ್ಗ–ಎ | ೩೦೦ – ೧೦೦೦ |
| ೩. | ಜಿಲ್ಲಾ ಕಾರಾಗೃಹ ವರ್ಗ–ಬಿ | ೧೦೦ – ೩೦೦ |
| ೪. | ತಾಲ್ಲೂಕು ಉಪ ಕಾರಾಗೃಹ | < ೧೦೦ |

**ತಾಲಿಕೆ ೨:** ಕರ್ನಾಟಕ ರಾಜ್ಯದ ಕಾರಾಗೃಹಗಳು ಅಸ್ತಿತ್ವದಲ್ಲಿರುವ ಸ್ಥಳಗಳು ಮತ್ತು ಕಾರಾಗೃಹಗಳಲ್ಲಿನ ಅಧಿಕೃತ ಸ್ಥಳಾವಕಾಶದ ಸಾಂಖ್ಯೀಕ ವಿವರ.

| **ಕ್ರಮ ಸಂಖ್ಯೆ** | **ಕಾರಾಗೃಹ** | **ಒಟ್ಟು ಸಂಖ್ಯೆ** | **ಸ್ಥಳಗಳ** | **ಅಧಿಕೃತ ಸ್ಥಳಾವಕಾಶ** |
|---|---|---|---|---|
| ೧ | ಕೇಂದ್ರ ಕಾರಾಗೃಹಗಳು | ೦೮ | ಬೆಂಗಳೂರು, ಬೆಳಗಾವಿ, ಬಳ್ಳಾರಿ, ಬಿಜಾಪುರ, ಗುಲ್ಬರ್ಗಾ, ಮೈಸೂರು, ಧಾರವಾಡ ಮತ್ತು ತುಮಕೂರು | ೬,೨೪೫ |
| ೨ | ಜಿಲ್ಲಾ ಕಾರಾಗೃಹಗಳು | ೧೫ | ಬೀದರ್, ಕಾರವಾರ, ಮಡಿಕೇರಿ, ಮಂಗಳೂರು, ರಾಯಚೂರು, ಶಿವಮೊಗ್ಗ, ಚಿತ್ರದುರ್ಗ, ತುಮಕೂರು, ಬಾಗಲಕೋಟೆ, ಚಾಮರಾಜನಗರ, ಹಾವೇರಿ, ರಾಮನಗರ, ಚಿಕ್ಕಬಳ್ಳಾಪುರ, ಕೊಪ್ಪಳ ಮತ್ತು ಉಡುಪಿ | ೨,೯೬೮ |
| ೩ | ಜಿಲ್ಲಾ ಕೇಂದ್ರಉಪಕಾರಾಗೃಹಗಳು | ೦೪ | ಚಿಕ್ಕಮಗಳೂರು, ಮಂಡ್ಯ, ಕೋಲಾರ ಮತ್ತು ಹಾಸನ | ೮೮೩ |
| ೪ | ವಿಶೇಷ ಉಪಕಾರಾಗೃಹಗಳು | ೦೨ | ದಾವಣಗೆರೆ, ಕೆ.ಜಿ.ಎಫ್. | ೨೫೦ |
| ೫ | ತರುಣ ಬಂದಿಖಾನೆ | ೦೧ | ಧಾರವಾಡ | ೨೫೦ |
| ೬ | ಬಾಲಾಪರಾಧಿ ಶಾಲೆ | ೦೧ | ಧಾರವಾಡ | ೨೦೦ |
| ೭ | ಬಯಲು ಬಂದಿಖಾನೆ | ೦೧ | ಕೋರಮಂಗಲ, ಬೆಂಗಳೂರು ಗ್ರಾ. | ೮೦ |
| ೮ | ಉಪಕಾರಾಗೃಹಗಳು | ೭೦ | ೩೦ ಇಲಾಖಾ ಅಧೀನದಲ್ಲಿವೆ ಮತ್ತು ೪೦ ಕಂದಾಯ ಇಲಾಖೆ ಅಧೀನದಲ್ಲಿವೆ. | ೨,೨೨೪ |
| ಒಟ್ಟಾರೆ | | ೧೦೨ | | ೧೩,೧೦೦ |

**ತಾಲಿಕೆ ೩:** ಕಾರಾಗೃಹಗಳಲ್ಲಿನ ಲಿಂಗಾಧಾರಿತ ಅಧಿಕೃತ ಸ್ಥಳಾವಕಾಶದ ಸಾಂಖ್ಯೀಕ ವಿವರ.

| **ಕ್ರಮ ಸಂಖ್ಯೆ** | **ಕಾರಾಗೃಹಗಳ ವರ್ಗೀಕರಣ** | **ಕಾರಾಗೃಹಗಳ ಸಂಖ್ಯೆ** | **ಪುರುಷ ಬಂದಿಗಳು** | **ಮಹಿಳಾ ಬಂದಿಗಳು** | **ಒಟ್ಟು** |
|---|---|---|---|---|---|
| ೦೧ | ಕೇಂದ್ರ ಕಾರಾಗೃಹಗಳು | ೦೮ | ೫,೭೬೦ | ೪೮೫ | ೬,೨೪೫ |
| ೦೨ | ಜಿಲ್ಲಾ ಕಾರಾಗೃಹಗಳು | ೧೫ | ೨,೬೮೬ | ೨೮೨ | ೨,೯೬೮ |
| ೦೩ | ಜಿಲ್ಲಾ ಉಪಕಾರಾಗೃಹಗಳು | ೦೪ | ೮೩೧ | ೫೨ | ೮೮೩ |
| ೦೪ | ವಿಶೇಷ ಉಪಕಾರಾಗೃಹಗಳು | ೦೨ | ೨೩೮ | ೧೨ | ೨೫೦ |
| ೦೫ | ಬಯಲು ಬಂದಿಖಾನೆ | ೦೧ | ೮೦ | – | ೮೦ |
| ೦೬ | ತರುಣ ಬಂದಿಖಾನೆ | ೦೧ | ೨೫೦ | – | ೨೫೦ |
| ೦೭ | ಬಾಲಾಪರಾಧಿ ಶಾಲೆ | ೦೧ | ೨೦೦ | – | ೨೦೦ |
| ೦೮ | ತಾಲ್ಲೂಕು ಉಪಕಾರಾಗೃಹ | ೭೦ | ೨,೦೪೩ | ೧೮೧ | ೨,೨೨೪ |
| ಒಟ್ಟು | | ೧೦೨ | ೧೨,೦೮೮ | ೧,೦೧೨ | ೧೩,೧೦೦ |

**ತಾಲಿಕೆ ೪:** ಕರ್ನಾಟಕ ರಾಜ್ಯದ ಕಾರಾಗೃಹ ಇಲಾಖೆಯ ಆಡಳಿತಾತ್ಮಕ ಕಾನೂನು ಮತ್ತು ನಿಯಮಾವಳಿಗಳು.

| ಕ್ರಮ ಸಂಖ್ಯೆ | ಕಾನೂನು ಮತ್ತು ನಿಯಮಾವಳಿಗಳು |
|---|---|
| ೦೧ | ಕರ್ನಾಟಕ ಕಾರಾಗೃಹಗಳ ಅಧಿನಿಯಮ– ೧೯೬೩ |
| ೦೨ | ಕರ್ನಾಟಕ ಬಂದಿಗಳ ಅಧಿನಿಯಮ– ೧೯೬೩ |
| ೦೩ | ಬಂದಿಗಳ ಗುರುತಿಸುವ ಅಧಿನಿಯಮ– ೧೯೨೦ |
| ೦೪ | ಕರ್ನಾಟಕ ಕಾರಾಗೃಹಗಳ ನಿಯಮಗಳು– ೧೯೭೪ |
| ೦೫ | ಕರ್ನಾಟಕ ಕಾರಾಗೃಹಗಳ ಕೈಪಿಡಿ– ೧೯೭೮ |

**ಕರ್ನಾಟಕ ರಾಜ್ಯದ ಕಾರಾಗೃಹ ವ್ಯವಸ್ಥೆಯ ಸುಧಾರಣಾ ಸಿಬ್ಬಂದಿವರ್ಗದವರ ಸಂಘಟನಾ ವ್ಯವಸ್ಥೆ:**

- ಪ್ರತಿಯೊಂದು ಕಾರಾಗೃಹದ ದೈನಂದಿನ ಆಡಳಿತಾತ್ಮಕ ಅವಶ್ಯಕತೆಗೆ ತಕ್ಕಂತೆ ಕಾರ್ಯನಿರ್ವಾಹಕ ಸಿಬ್ಬಂದಿಗಳಾದ ವಾರ್ಡರ್, ಹೆಡ್‌ವಾರ್ಡರ್ ಮತ್ತು ಚೀಫ್‌ವಾರ್ಡರ್ ಇವರುಗಳು ದಿನಕ್ಕೆ ಹಗಲು ವೇಳೆ ಎರಡು ಪಾಳಿಯಲ್ಲಿ ಹಾಗೂ ರಾತ್ರಿ ವೇಳೆ ಎರಡು ಪಾಳಿಯಲ್ಲಿ ಬಂದಿಗಳ ಚಲನ ವಲನಗಳನ್ನು ಗಮನಹರಿಸಲು ಹಾಗೂ ದಿನದ ೨೪ ಗಂಟೆ ಭದ್ರತೆಯಿಂದ ಕಾರಾಗೃಹದಲ್ಲಿನ ಬಂದಿಗಳನ್ನು ಕಾವಲು ಕಾಯುವ ಕರ್ತವ್ಯ ನಿರ್ವಹಿಸಲು ಅತ್ಯಗತ್ಯವಾಗಿ ಅವಶ್ಯಕತೆ ಇರುತ್ತದೆ.
- ಕೇಂದ್ರ ಕಾರಾಗೃಹಗಳ ಮುಖ್ಯಸ್ಥರಾಗಿ ಮುಖ್ಯ ಅಧೀಕ್ಷಕರ ವೃಂದದ ಅಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿದ್ದು, ಸದರಿಯವರ ಸಹಾಯಕರಾಗಿ ಅಧೀಕ್ಷಕರು, ಸಹಾಯಕ ಅಧೀಕ್ಷಕರು, ಚೀಫ್ ಜೈಲರ್ ಮತ್ತು ಜೈಲರರು ಕಾರ್ಯನಿರ್ವಹಿಸಲಿದ್ದಾರೆ.
- ಜಿಲ್ಲಾ ಕಾರಾಗೃಹದ (ವರ್ಗ–ಎ) ಮುಖ್ಯಸ್ಥರಾಗಿ ಅಧೀಕ್ಷಕರ ವೃಂದದ ಅಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿದ್ದು, ಸದರಿಯವರ ಸಹಾಯಕರಾಗಿ ಸಹಾಯಕ ಅಧೀಕ್ಷಕರು, ಚೀಫ್ ಜೈಲರ್ ಮತ್ತು ಜೈಲರರು ಕಾರ್ಯನಿರ್ವಹಿಸಲಿದ್ದಾರೆ.

- ಜಿಲ್ಲಾ ಕಾರಾಗೃಹದ (ವರ್ಗ–ಬಿ) ಮುಖ್ಯಸ್ಥರಾಗಿ ಸಹಾಯಕ ಅಧೀಕ್ಷಕರ ವೃಂದದ ಅಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿದ್ದು, ಸದರಿಯವರ ಸಹಾಯಕರಾಗಿ ಚೀಫ್ ಜೈಲರ್ ಮತ್ತು ಜೈಲರರು ಕಾರ್ಯನಿರ್ವಹಿಸಲಿದ್ದಾರೆ.
- ತಾಲ್ಲೂಕು ಉಪ ಕಾರಾಗೃಹಗಳ ಮುಖ್ಯಸ್ಥರಾಗಿ ಜೈಲರ್ ದರ್ಜೆಯ ಅಧಿಕಾರಿಗಳು ಕಾರ್ಯನಿರ್ವಹಿಸಲಿದ್ದು, ಇವರಿಗೆ ಸಹಾಯಕರಾಗಿ ಚೀಫ್ ವಾರ್ಡರ್‌ಗಳು ಕಾರ್ಯನಿರ್ವಹಿಸಲಿದ್ದಾರೆ.
- ಕಾರಾಗೃಹಗಳ ಪ್ರಧಾನ ಕಛೇರಿಯಲ್ಲಿ ಹೆಚ್ಚುವರಿ ಕಾರಾಗೃಹಗಳ ಮಹಾನಿರೀಕ್ಷಕರ ೦೧ ಹೆಚ್ಚುವರಿ ಹುದ್ದೆಯನ್ನು ಸೃಜಿಸಿ ಸದರಿ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುವ ಅಧಿಕಾರಿಯವರು ರಾಜ್ಯದ ವಿವಿಧ ಕಾರಾಗೃಹಗಳ ಆಡಳಿತವನ್ನು ಮೇಲುಸ್ತುವಾರಿ ನಿರ್ವಹಿಸುವ ಅವಶ್ಯಕತೆ ಇರುತ್ತದೆ.
- ರಾಜ್ಯದ ಕಾರಾಗೃಹಗಳ ಆಡಳಿತ ನಿರ್ವಹಣೆಯನ್ನು ಸುಲಭಗೊಳಿಸುವ ಅವಶ್ಯಕತೆ ಇರುವುದರಿಂದ ಕಾರಾಗೃಹಗಳ ಪ್ರಧಾನ ಕಛೇರಿಯನ್ನು ಹೊರತುಪಡಿಸಿ ಇತರ ನಾಲ್ಕು ವಲಯ ವಿಭಾಗ ಕಛೇರಿಗಳನ್ನು ಉತ್ತರ ವಲಯ, ದಕ್ಷಿಣ ವಲಯ ವಿಭಾಗ, ಪೂರ್ವ ವಲಯ ವಿಭಾಗ ಮತ್ತು ಪಶ್ಚಿಮ ವಲಯ ವಿಭಾಗಗಳಾಗಿ ನಾಲ್ಕು ವಲಯ ವಿಭಾಗ ಕಛೇರಿಗಳನ್ನು ರಚಿಸಲಾಗಿದೆ. ಸದರಿ ವಲಯ ವಿಭಾಗಗಳ ಮುಖ್ಯಸ್ಥರು ಉಪಮಹಾನಿರೀಕ್ಷಕರಾಗಿದ್ದು, ಇವರ ಸಹಾಯಕರಾಗಿ ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕರು ಮತ್ತು ಅಧೀಕ್ಷಕರು ಕಾರ್ಯನಿರ್ವಹಿಸಲಿದ್ದಾರೆ. ಸದರಿಯವರು ಆಗಾಗ್ಗೆ ತಮ್ಮ ವ್ಯಾಪ್ತಿಯಲ್ಲಿ ಬರುವ ಕಾರಾಗೃಹಗಳಿಗೆ ಅನಿರೀಕ್ಷಿತ ಭೇಟಿ ನೀಡಿ ಪರಿವೀಕ್ಷಣೆ ನಡೆಸಿ ಕಾರಾಗೃಹದ ಸಮಸ್ಯೆಗಳಿಗೆ ಸ್ಪಂದಿಸಲು ನೆರವಾಗುವ ಹಿನ್ನಲೆಯಲ್ಲಿ ಕಾರ್ಯನಿರ್ವಹಿಸಲಿದ್ದಾರೆ. ಕಾರ್ಯನಿರ್ವಾಹಕ ಸಿಬ್ಬಂದಿಗಳ ಜೊತೆಗೆ ಲಿಪಿಕ ಸಿಬ್ಬಂದಿ ಹಾಗೂ ಇತರ ಸಿಬ್ಬಂದಿಗಳ ಅಗತ್ಯತೆಯನ್ನು ಪರಿಗಣಿಸಿಕೊಂಡು ಪ್ರತಿಯೊಂದು ವಲಯಕ್ಕೂ ಅಗತ್ಯ ಲಿಪಿಕ ಸಿಬ್ಬಂದಿ ಹಾಗೂ ಇತರೆ ಸಿಬ್ಬಂದಿಯವರನ್ನು ನೇಮಿಸಬೇಕಿದೆ.
- ಸಹಾಯಕ ಅಧೀಕ್ಷಕರ ಮೇಲ್ಪಟ್ಟ ಹಾಗೂ ಅಧಿಕಾರಿ ಹುದ್ದೆಗಳ ವೃಂದದಲ್ಲಿ ಮೇಲು ಸ್ಥರದಲ್ಲಿರುವ ಕಾರಾಗೃಹದ ಮುಖ್ಯಸ್ಥರಾದ ಉಪಮಹಾನಿರೀಕ್ಷಕರು, ಮುಖ್ಯ ಅಧೀಕ್ಷಕರು ಮತ್ತು ಅಧೀಕ್ಷಕರು ಕೆಳಗಿನ ಹಂತದ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಮೇಲುಸ್ತುವಾರಿ, ಶಿಸ್ತು, ಸಂಸ್ಥೆಯ ಭದ್ರತೆ, ಪರಿವೀಕ್ಷಣೆ ಹಾಗೂ ಕಾರಾಗೃಹದ ಆಡಳಿತವನ್ನು ನೋಡಿಕೊಳ್ಳಲು ಅವಶ್ಯಕವಾಗಿರುತ್ತಾರೆ.
- ಸದರಿ ಅಧಿಕಾರಿಗಳು ಕಾರಾಗೃಹದ ವಿವಿಧ ವಿಭಾಗಗಳ ಆಡಳಿತದಲ್ಲಿ ಸಜಾ ಹಾಗೂ ವಿಚಾರಣಾ ಬಂದಿಗಳ ದಾಖಲಾತಿಗಳು, ಬಿಡುಗಡೆ, ಭದ್ರತೆ, ತಪಾಸಣೆ, ನ್ಯಾಯಾಲಯಗಳ ವ್ಯವಹಾರಗಳು, ಜೈಲಿನ ಮುಖ್ಯ ದ್ವಾರದ ಭದ್ರತೆ, ಬಂದಿಗಳ ಭದ್ರತೆ, ಬಂದಿಗಳ ಆಹಾರ ತಯಾರಿಕೆ ಮತ್ತು ವಿತರಣೆ, ಸಂದರ್ಶನ, ಸಿಬ್ಬಂದಿಗಳ ಹಾಜರಾತಿ, ಕಾರ್ಖಾನೆಗಳು, ತೋಟಗಳು, ಕಾರಾಗೃಹದ ಸ್ವಚ್ಛತೆ ಮುಂತಾದ ಆಡಳಿತಾತ್ಮಕ ಮತ್ತು ಭದ್ರತಾ ಜವಾಬ್ದಾರಿಗಳ ಮೇಲುಸ್ತುವಾರಿ ವಹಿಸಿಕೊಂಡು ನೋಡಿಕೊಳ್ಳಬೇಕಾಗಿರುತ್ತದೆ.

**ಕರ್ನಾಟಕ ರಾಜ್ಯದ ಕಾರಾಗೃಹ ವ್ಯವಸ್ಥೆಯ ಲಿಪಿಕ ಸಿಬ್ಬಂದಿಗಳ ಸಂಘಟನಾ ವ್ಯವಸ್ಥೆ:**

ಕಾರಾಗೃಹಗಳ ವರ್ಗೀಕರಣದಂತೆ ಸಿಬ್ಬಂದಿ ಶಾಖೆಯಲ್ಲಿ ಕರ್ತವ್ಯ ನಿರ್ವಹಿಸಲು ಲಿಪಿಕ ಸಿಬ್ಬಂದಿಗಳ ಅವಶ್ಯಕತೆ ಇರುತ್ತದೆ. ಲಿಪಿಕ ಸಿಬ್ಬಂದಿಗಳ ವರ್ಗೀಕರಣದಲ್ಲಿಯೂ ಸಹ ಪಿರಮಿಡ್ ಮಾದರಿಯನ್ನೇ ಅನುಸರಿಸಬೇಕಿದೆ. ಪತ್ರಾಂಕಿತ ವ್ಯವಸ್ಥಾಪಕರು, ವ್ಯವಸ್ಥಾಪಕರು, ಕಛೇರಿ ಅಧೀಕ್ಷಕರು, ಪ್ರಥಮ ದರ್ಜೆ ಸಹಾಯಕರು, ದ್ವಿತೀಯ ದರ್ಜೆ ಸಹಾಯಕರು, ಶೀಘ್ರಲಿಪಿಗಾರರು ಮತ್ತು ಬೆರಳಚ್ಚುಗಾರರ ಹುದ್ದೆಗಳನ್ನು ವಿಂಗಡಿಸಲಾಗಿದ್ದು ಪ್ರತಿಯೊಂದು ಕಾರಾಗೃಹದ ಸಿಬ್ಬಂದಿಗಳ ಅವಶ್ಯಕತೆಗೆ ತಕ್ಕಂತೆ ಲಿಪಿಕ ಅಧಿಕಾರಿ/ಸಿಬ್ಬಂದಿಗಳ ವೃಂದವನ್ನು ರಚಿಸಲಾಗಿದೆ. ಕಾರಾಗೃಹಗಳು ಮಾತ್ರವಲ್ಲದೇ ಪ್ರಧಾನ ಕಛೇರಿಗೆ, ವಿಭಾಗ ಕಛೇರಿಗಳಿಗೆ ಹಾಗೂ ಕಾರಾಗೃಹ ಸಿಬ್ಬಂದಿ ತರಬೇತಿ ಸಂಸ್ಥೆಗೆ ಲಿಪಿಕ ಅಧಿಕಾರಿ/ಸಿಬ್ಬಂದಿಗಳ ವೃಂದವು ಪ್ರತ್ಯೇಕವಾಗಿ ಬೇಕಾಗಿರುತ್ತದೆ. ಲಿಪಿಕ ಸಿಬ್ಬಂದಿ ವಿಭಾಗದಲ್ಲಿ ಕಾರಾಗೃಹದ ಆಡಳಿತಕ್ಕೆ ಸಂಬಂಧಿಸಿದಂತೆ, ಅಧಿಕಾರಿ/ಸಿಬ್ಬಂದಿಗಳ ವೇತನ, ಭತ್ಯೆಗಳ ಬಿಲ್ಲುಗಳನ್ನು ರಚಿಸುವುದು, ನಗದು ಪಾಲನೆ, ಇಲಾಖೆ ವಿಚಾರಣೆಗಳು, ಸಿಬ್ಬಂದಿಗಳ ಮಾಹಿತಿ ಕಡತಗಳು, ರಜೆಗಳು, ಇತರ ಪತ್ರ ವ್ಯವಹಾರಗಳನ್ನು ನಿರ್ವಹಿಸಲು ಲಿಪಿಕ ಸಿಬ್ಬಂದಿಗಳು ಅವಶ್ಯಕವಾಗಿ ಬೇಕಾಗಿದ್ದಾರೆ.

**ಕರ್ನಾಟಕ ರಾಜ್ಯದ ಕಾರಾಗೃಹ ವ್ಯವಸ್ಥೆಯ ಇತರೆ ಸಿಬ್ಬಂದಿವರ್ಗದವರ ಸಂಘಟನಾ ವ್ಯವಸ್ಥೆ:**

ಕಾರಾಗೃಹದ ಆಡಳಿತಾತ್ಮಕ ವ್ಯವಸ್ಥೆಯಲ್ಲಿ ಕಾರ್ಯನಿರ್ವಾಹಕ, ಲಿಪಿಕ ಸಿಬ್ಬಂದಿಗಳಂತೆಯೇ ಕೆಲವೊಂದು ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ವ್ಯವಸ್ಥೆಯ ಅವಶ್ಯಕತೆಗೆ ತಕ್ಕಂತೆ ನಿಯೋಜನೆ ಮೇಲೆ ಪಡೆಯುವ ಅವಶ್ಯಕತೆ ಇರುತ್ತದೆ. ಅದರಲ್ಲಿ ಲೆಕ್ಕಾಧಿಕಾರಿಗಳು, ಲೆಕ್ಕಾಧೀಕ್ಷಕರು, ವೈದ್ಯಾಧಿಕಾರಿಗಳು, ಫಾರ್ಮಸಿಸ್ಟ್, ಮೇಟ್ರನ್, ನರ್ಸ್, ಎಕ್ಸ್–ರೇ ಟೆಕ್ನೀಶಿಯನ್, ಸಿವಿಲ್ ಇಂಜಿನಿಯರ್ಸ್, ಅಗ್ರಿಕಲ್ಚರ್ ಅಧಿಕಾರಿಗಳು, ಶಿಕ್ಷಕರು ಮುಂತಾದ ಹುದ್ದೆಗಳನ್ನು ಇತರೆ ಇಲಾಖೆಗಳಿಂದ ನಿಯೋಜನೆ ಮೇಲೆ ಪಡೆಯುವುದು ಅತ್ಯಂತ ಅವಶ್ಯಕವಾಗಿದೆ.

- ಕಾರಾಗೃಹದಲ್ಲಿ ಬಂದಿಗಳ ಆರೋಗ್ಯದ ಹಿತದೃಷ್ಟಿಯಿಂದ ಕಾರಾಗೃಹದ ಆಸ್ಪತ್ರೆಯಲ್ಲಿ ಕೆಲಸ ನಿರ್ವಹಿಸಲು ಫಿಸಿಯೋ ವೈದ್ಯರು, ಮಹಿಳಾ ವೈದ್ಯರು (ಮಹಿಳಾ ಬಂದಿಗಳ ವಿಭಾಗಕ್ಕೆ), ಮನೋವೈದ್ಯರು, ಶುಶ್ರೂಷಕರು, ಫಾರ್ಮಸಿಸ್ಟರು ಅವಶ್ಯಕವಾಗಿ ಬೇಕಾಗಿರುತ್ತಾರೆ.
- ಕಾರಾಗೃಹ ಇಲಾಖೆಯಲ್ಲಿನ ವಿವಿಧ ಕಾಮಗಾರಿಗಳು, ವಿದ್ಯುತ್ ನಿರ್ವಹಣೆ, ನೀರು ಸೌಲಭ್ಯ, ನೂತನ ಕಾರಾಗೃಹಗಳ ನಿರ್ಮಾಣ ಕೆಲಸಗಳಲ್ಲಿ ಆಡಳಿತ ಅವಶ್ಯಕತೆಗೆ ಅನುಗುಣವಾಗಿ ಕಾರಾಗೃಹದ ನೀಲಿ ನಕ್ಷೆಗಳನ್ನು ತಯಾರಿಸಲು, ಅಂದಾಜು ಪಟ್ಟಿ ತಯಾರಿಸಲು ಹಾಗೂ ಮುಂತಾದ ಸಂಬಂಧಪಟ್ಟ ತಾಂತ್ರಿಕ ಕೆಲಸಗಳ ನಿರ್ವಹಣೆ ಮೇಲುಸ್ತುವಾರಿಗಾಗಿ ಸಿವಿಲ್ ಇಂಜಿನಿಯರ್ಸ್, ಎಲೆಕ್ಟ್ರಿಕಲ್ ಇಂಜಿನಿಯರ್ಸ್ ಹಾಗೂ ತಾಂತ್ರಿಕ ಅಧಿಕಾರಿ ವೃಂದವನ್ನು ಸಂಬಂಧಪಟ್ಟ ಇಲಾಖೆಗಳಿಂದ ನಿಯೋಜನೆ ಮೇಲೆ ಪಡೆಯುವ ಅವಶ್ಯಕತೆ ಇರುತ್ತದೆ.
- ಅದರಂತೆಯೇ ಬಂದಿಗಳ ಶಿಕ್ಷಣ, ವಯಸ್ಕರ ಶಿಕ್ಷಣ, ಉನ್ನತ ಶಿಕ್ಷಣ ವಿಭಾಗಗಳ ನಿರ್ವಹಣೆಗಾಗಿ ಶಿಕ್ಷಕರು, ಕಾರಾಗೃಹದ ಪಶುಪಾಲನೆ ವಿಭಾಗದ ನಿರ್ವಹಣೆಗೆ ಪಶು ಪರಿವೀಕ್ಷಕರು, ತೋಟಗಾರಿಕಾ ಬೆಳೆಗಳ ನಿರ್ವಹಣೆಗೆ ಅಗ್ರಿಕಲ್ಚರಲ್/ಹಾರ್ಟಿಕಲ್ಚರಲ್ ಅಧಿಕಾರಿಗಳನ್ನು ಸಹ ಸಂಬಂಧಪಟ್ಟ ಇಲಾಖೆಗಳಿಂದ ನಿಯೋಜನೆ ಮೇಲೆ ಪಡೆಯುವ ಅವಶ್ಯಕತೆ ಇರುತ್ತದೆ.

- ಕಾರಾಗೃಹದ ಪ್ರಧಾನ ಕಛೇರಿಯಲ್ಲಿ ಲೆಕ್ಕಶಾಖೆಯ ಸುಗಮ ನಿರ್ವಹಣೆಗೆ ಹಾಗೂ ಇತರ ಕಾರಾಗೃಹಗಳ ಆಡಿಟ್ ಪರಿವೀಕ್ಷಣೆ ಉಸ್ತುವಾರಿಗೆ ಅವಶ್ಯಕವಾಗಿ ರಾಜ್ಯ ಲೆಕ್ಕ ಪರಿಶೋಧನಾ ಇಲಾಖೆಯಿಂದ ಲೆಕ್ಕಾಧಿಕಾರಿಗಳನ್ನು ನಿಯೋಜನೆ ಮೇಲೆ ಪಡೆಯುವ ಅವಶ್ಯಕತೆ ಇರುತ್ತದೆ. ಅದರಂತೆ ಕೇಂದ್ರ ಕಾರಾಗೃಹಗಳ ಲೆಕ್ಕ ನಿರ್ವಹಣೆಗೆ ಲೆಕ್ಕಾಧೀಕ್ಷಕರನ್ನು ನಿಯೋಜಿಸುವ ಅವಶ್ಯಕತೆ ಇದೆ.
- ಇಲಾಖೆಯ ನಾಲ್ಕನೇ ವರ್ಗೀಕರಣವಾದ ಇತರೆ ಸಿಬ್ಬಂದಿ ವರ್ಗದಲ್ಲಿ ಕಾರಾಗೃಹಗಳ ಕಾರ್ಖಾನೆಗಳಲ್ಲಿ ಬಂಧಿಗಳಿಗೆ ತರಬೇತಿ ನೀಡಲು ಅವಶ್ಯಕವಿರುವ ವಿವಿಧ ವೃತ್ತಿಗಳಲ್ಲಿ ನೈಪುಣ್ಯತೆ ಹೊಂದಿರುವ ತರಬೇತಿ ಬೋಧಕರು, ಕಾರಾಗೃಹಗಳ ವಿದ್ಯುತ್ ವ್ಯವಸ್ಥೆಯ ನಿರ್ವಹಣೆಗಾಗಿ ಎಲೆಕ್ಟ್ರೀಷಿಯನ್‌ಗಳು, ಡ್ರೈವರ್‌ಗಳು, ಅಟೆಂಡರ್‌ಗಳು, ಕಾರಾಗೃಹದ ಬಂದಿಗಳಿಗೆ ಅಡುಗೆ ಮಾಡಲು ಅಡುಗೆಯವರು, ಕ್ಷೌರಿಕರು, ಜವಾನರು, ಹಾಗೂ ಸ್ವಚ್ಚತೆ ಕೆಲಸದವರು ಅವಶ್ಯಕವಾಗಿ ಪ್ರಧಾನ ಕಛೇರಿಗೆ, ಕಾರಾಗೃಹಗಳಿಗೆ, ಸಿಬ್ಬಂದಿ ತರಬೇತಿ ಸಂಸ್ಥೆಗೆ ಮತ್ತು ವಿಭಾಗೀಯ ಕಛೇರಿಗಳಿಗೆ ಅವಶ್ಯಕತೆಗೆ ತಕ್ಕಂತೆ ನೇಮಕಾತಿ ಮಾಡಿಕೊಳ್ಳಬೇಕಾದ ಅವಶ್ಯಕತೆ ಇದೆ.

**ಅಗತ್ಯವಿರುವ ವಿವಿಧ ವೃಂದದ ಅಧಿಕಾರಿ ಮತ್ತು ಸಿಬ್ಬಂದಿವರ್ಗದವರ ಕೋಷ್ಟಕ:**

ಕರ್ನಾಟಕ ರಾಜ್ಯದ ವಿವಿಧ ಕಾರಾಗೃಹಗಳ ಭದ್ರತೆ ಮತ್ತು ಆಡಳಿತದ ಹಿತದೃಷ್ಟಿಯಿಂದ ಬಂದಿಗಳ ಸಂಖ್ಯೆಗೆ ಅನುಗುಣವಾಗಿ ಕಾರಾಗೃಹ ಇಲಾಖೆಯ ವಿವಿಧ ವೃಂದದ ಅಧಿಕಾರಿ ಮತ್ತು ಸಿಬ್ಬಂದಿಗಳ ಹುದ್ದೆಗಳನ್ನು ಪ್ರಸ್ತುತ ಇರುವ ಹುದ್ದೆಗಳ ಜೊತೆಗೆ ಹೆಚ್ಚಿನ ಸಿಬ್ಬಂದಿಗಳ ಅಗತ್ಯತೆಯನ್ನು ಪರಿಗಣಿಸಿಕೊಂಡು ಸಂಸ್ಥೆಗಳಿಗೆ ಅನುಗಣವಾಗಿ ಕಾರಾಗೃಹ ಇಲಾಖೆಯ ಸಿಬ್ಬಂದಿ ಕೋಷ್ಠಕವನ್ನು (ಖಣಚಿಜಿಜಿಟಿರ ಕಚಿಣಣಡಿಟ) ಈ ಕೆಳಕಂಡಂತೆ ರಚಿಸಲಾಗಿದೆ.

| ಕ್ರಮ ಸಂಖ್ಯೆ | ಹುದ್ದೆಯ ಪದನಾಮ | ಹೊಸದಾಗಿ ಸೃಜಿಸಬೇಕಾಗಿರುವ ಹುದ್ದೆಗಳ ಸಂಖ್ಯೆ |
|---|---|---|
| 1 | Addl. Director General of Police & Inspector General of Prisons | 0 |
| 2 | Addl. Inspector General of Prisons | 1 |
| 3 | Deputy Inspector General of Police (Admin) | 0 |
| 4 | Deputy Inspector General of Prisons | 3 |
| 5 | Chief Superintendent of Prisons | 6 |
| 6 | Superintendent of Prisons | 13 |
| 7 | Asst. Superintendent of Prisons | 31 |
| 8 | Chief Jailor | 100 |
| 9 | Jailor | 149 |
| 10 | Chief Warder | 397 |
| 11 | Head Warder | 593 |
| 12 | Warder | 1,446 |
| 13 | Gazetted Manager | 7 |
| 14 | Manager | 30 |
| 15 | Office Superintendent | 61 |
| 16 | First Division Assistant | 126 |
| 17 | Second Division Assistant | 282 |
| 18 | Steno | 27 |
| 19 | Typist | 91 |
| 20 | Chief Instructor | 7 |
| 21 | Instructor-Gr-1 | 2 |
| 22 | Instructor-Gr-2 | 5 |
| 23 | Electricians / Mechanic | 11 |
| 24 | Drivers | 36 |
| 25 | Attender / Peon / X-ray Attender | 22 |
| 26 | Sweeper | 13 |
| 27 | Cook | 26 |
| 28 | Barber | 14 |
| 29 | Account Officer | 0 |
| 30 | Account Superintendent | 0 |
| 31 | Audit Officer | 1 |
| 32 | Medical Officers | 14 |
| 33 | Psychiatrist | 6 |
| 34 | Pharmacist | 0 |
| 35 | Lab Technician | 2 |
| 36 | X-ray Technician | 4 |
| 37 | Nurse / Matron | 19 |
| 38 | Teacher / Faculty | 3 |
| 39 | Press foreman | 2 |
| 40 | Asst. foreman | 3 |
| 41 | Asst. Agricultural Officer | 0 |
| 42 | Asst. Horticultural Officer | 0 |
| 43 | Asst. Veterinary Officer | 1 |
| 44 | Livestock Inspector | 0 |
| 45 | Legal Officer | 1 |
| 46 | Junior Engineer | 1 |
| 47 | MIS Co-Ordinator | 1 |

**ಉಪಸಂಹಾರ**

ಕಾರಾಗೃಹಗಳು ದಂಡ ನ್ಯಾಯ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿದೆ. ಸಜಾ ಬಂದಿಗಳ ಮತ್ತು ವಿಚಾರಣಾಧೀನ ಬಂದಿಗಳ ಸುರಕ್ಷಿತ ಅಭಿರಕ್ಷೆಗಾಗಿ ಕಾರಾಗೃಹಗಳನ್ನು ಸ್ಥಾಪಿಸಲಾಗಿದೆ. ಕಾರಾವಾಸದ ಮೂಲಕ ದಂಡಾದೇಶ ವಿಧಿಸುವ ಉದ್ದೇಶ ಮತ್ತು ಔಚಿತ್ಯವೇನೆಂದರೆ– "ಸಮಾಜವನ್ನು ಅಪರಾಧದ ವಿರುದ್ಧ ಮತ್ತು ಪ್ರತಿಕಾರದ ವಿರುದ್ಧ ರಕ್ಷಿಸುವುದು ಮತ್ತು ಬಂದಿಗಳಿಗೆ ಸತತ ತರಬೇತಿ, ವಿದ್ಯಾಭ್ಯಾಸ ಮತ್ತು ಪರಸ್ಪರ ತಿಳುವಳಿಕೆಗಳಿಂದ ಸುಧಾರಿತ ನಾಗರಿಕರನ್ನಾಗಿ ಮಾಡಿ ಸಮಾಜದಲ್ಲಿ ಪುನರ್ ಸೇರ್ಪಡೆ ಮಾಡಲು ಬದ್ಧವಾಗಿರುವುದೇ ಆಗಿದೆ". ಜೀವನದಲ್ಲಿ ಕ್ಷಣಿಕ ಆವೇಶಕ್ಕೊಳಗಾಗಿ ಆಕಸ್ಮಿಕವಾಗಿ ಅಪರಾಧವೆಸಗಿ ಜೈಲು ಸೇರಿದ ವ್ಯಕ್ತಿಗೆ ಕಾರಾಗೃಹಗಳಲ್ಲಿ ಶಿಕ್ಷೆ ನೀಡುವ ಹಾಗೂ ಪಶ್ಚಾತ್ತಾಪ ಪಡುವ ಸ್ಥಳವಾಗದೆ, ಶಿಕ್ಷೆ ನಂತರ ಸಮರ್ಪಕವಾಗಿ ಜೀವನ ಎದುರಿಸುವ ಸಲುವಾಗಿ ಆತನ ಮನಃಪರಿವರ್ತನೆಯೊಂದಿಗೆ ಪುನರ್ ವಸತಿಗಾಗಿ ವೃತ್ತಿ ತರಬೇತಿ ನೀಡುವ ಸ್ಥಳಗಳಾಗಿವೆ. ಆದರೆ ಇವೆಲ್ಲವನ್ನೂ ಕಾರ್ಯರೂಪಕ್ಕೆ ತರಬೇಕಾದ ಸಿಬ್ಬಂದಿವರ್ಗದವರ ಅಸ್ತಿತ್ವವೇ ಕಾರಾಗೃಹ ವ್ಯವಸ್ಥೆಯ ಋಣಾತ್ಮಕ ಸನ್ನಿವೇಶದಿಂದ ದುರ್ಬಲವಾದರೆ ಮನಃಪರಿವರ್ತನೆಗೆ ನೈಜ ಅರ್ಥ ಕಲ್ಪಿಸಲು ಸಾದ್ಯವಾಗದಂತ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಕಾರಾಗೃಹ ವ್ಯವಸ್ಥೆಯಲ್ಲಿ ಸಿಬ್ಬಂದಿವರ್ಗದವರು ಮತ್ತು ಬಂದಿಗಳು ಒಂದೇ ನಾಣ್ಯದ ಎರಡು ಮುಖಗಳಿದ್ದ ಹಾಗೇ. ಇಬ್ಬರ ಅಸ್ತಿತ್ವದಲ್ಲಿ

ಯಾರೊಬ್ಬರಿಗೆ ಹಾನಿಯಾದರೂ ಇಡೀ ವ್ಯವಸ್ಥೆಗೆ ಮಾರಕವಾಗುತ್ತದೆ. ಈ ನಿಟ್ಟಿನಲ್ಲಿ ಸಂಬಂಧಪಟ್ಟವರು ಧನಾತ್ಮಕವಾದ ಸುಧಾರಣೆಯನ್ನು ತರುವತ್ತ ಗಮನಹರಿಸಬೇಕಾದದ್ದು ಅನಿವಾರ್ಯವಾಗಿದೆ.

**ಪರಾಮರ್ಶನ ಗ್ರಂಥ**


1. ಕರ್ನಾಟಕ ಬಂದಿಗಳ ಅಧಿನಿಯಮ–೧೯೬೩.
2. ಕರ್ನಾಟಕ ಕಾರಾಗೃಹಗಳ ಅಧಿನಿಯಮ–೧೯೬೩.
3. ಕರ್ನಾಟಕ ಕಾರಾಗೃಹ ಇಲಾಖೆಯ ವಾರ್ಷಿಕ ವರದಿ–೨೦೧೦ ರಿಂದ ೨೦೧೫.
4. ಕರ್ನಾಟಕ ಕಾರಾಗೃಹಗಳ ಕೈಪಿಡಿ–೧೯೭೮.
5. ಕರ್ನಾಟಕ ಕಾರಾಗೃಹಗಳ ನಿಯಮಗಳು–೧೯೭೪.
6. Atkin-Plunk C, Armstrong G. Transformational Leadership Skills and Correlates of Prison Warden Job Stress. Criminal Justice and Behavior. 2013; 40(5):551-568.
7. Carlson J, Anson R, Thomas G. Correctional Officer Burnout and Stress: Does Gender Matter? The Prison Journal. 2003; 83(3):277-288.
8. Crewe B, Liebling A, Hulley S. Staff culture, use of authority and prisoner quality of life in public and private sector prisons. Australian & New Zealand Journal of Criminology. 2011; 2(44, 1):94-115.
9. Dowden C, Tellier C. Predicting work-related stress in correctional officers: A meta-analysis. J Crim Just. 2004; 32:31-47.
10. Garland B, McCarty W. Job Satisfaction behind Walls and Fences: A Study of Prison Health Care Staff. Criminal Justice Policy Review. 2009; 20(2):188-208.
11. Higgins G, Tewksbury R, Denney A. Validating a Measure of Work Stress for Correctional Staff: A Structural Equation Modeling Approach. Criminal Justice Policy Review. 2013; 24(3):338-352.
12. Kassebaum G, Ward D, Wilner D. Some Correlates of Staff Ideology in the Prison. Journal of Research in Crime and Delinquency. 1964; 1(2):96-109.
13. Liebling A. Prison Officers, Policing and the Use of Discretion. Theoretical Criminology, 2000; 4(3):333-357.
14. Minor K, Wells J, Angel E, Matz A. Predictors of Early Job Turnover Among Juvenile Correctional Facility Staff. Criminal Justice Review. 2010; 36(1):58-75.
15. Pradeep Kumar P. "ಕರ್ನಾಟಕ ರಾಜ್ಯದ ಕೇಂದ್ರ ಕಾರಾಗೃಹಗಳಲ್ಲಿನ ಸಿಬ್ಬಂದಿವರ್ಗದವರ ಸ್ಥಿತಿಗತಿಗಳ ಒಂದುಸಮಗ್ರ ಅಧ್ಯಯನ", Department of Studies in Criminology and Forensic Science, University of Mysore, Mysore. 2014.
16. Schaufeli W, Peeters M. Job stress and burnout among Correctional officers: A literature review. International Journal of Stress Management. 2000; 7:19-48.
17. Woodall J. Identifying Health Promotion Needs among Prison Staff in Three English Prisons: Results From a Qualitative Study. Health Promotion Practice, 2013; 14(2):256-262.
18. World Health Organization. MIND Project: Mental Improvement for Nations Development Department of Mental Health & Substance Abuse, WHO Geneva. 2008.
19. http://www.who.int/mental_health/policy/development/ MH & Prisons Factsheet. pdf.